ಉಲ್ಲೇಖ 1 ರಿಂದ 3 ರಲ್ಲಿ ಪ್ರಸ್ತಾಪಿಸಿರುವ ಸುತ್ತೋಲೆಗಳಲ್ಲಿ ವಸತಿ, ವಾಣಿಜ್ಯ ಇತರೆ ಕಟ್ಟಡಗಳ ಮೇಲೆ ಹಾಗೂ ಭೂ ಪ್ರದೇಶದ ಮೇಲ್ಭಾಗದಲ್ಲಿ ದೂರ ಸಂಪರ್ಕ ಉಪಕರಣಗಳು, ಬೇಸ್ ಟ್ರಾನ್ಸ್ ರಿಸೀವರ್ ಸ್ಟೇಷನ್ ಮತ್ತು ಇತರೆ ತಂತಿ ಗೋಪುರಗಳನ್ನು ಅಳವಡಿಸುವ ಬಗ್ಗೆ ರಾಜ್ಯದ ಎಲ್ಲಾ ಅಭಿವೃದ್ಧಿ ಪ್ರಾಧಿಕಾರಗಳಿಗೆ, ನಗರ ಪಾಲಿಕೆಗಳಿಗೆ, ನಗರಸಭೆಗಳಿಗೆ ಸಂಬಂಧಪಟ್ಟ ಸಂಸ್ಥೆಗಳು ನಿಯಮಾವಳಿಗಳಂತೆ ನಿರಾಕ್ಷೇಪಣಾ ಪತ್ರಕ್ಕಾಗಿ ಸಂಪರ್ಕಿಸಿದಲ್ಲಿ ನಿರಾಕ್ಷೇಪಣಾ ಪತ್ರ ನೀಡಲು ಪಾಲಿಸಬೇಕಾದ ಅಂಶಗಳ ಬಗ್ಗೆ ಕೆಲವು ನಿರ್ದೇಶನಗಳನ್ನು ನೀಡಲಾಗಿತ್ತು.

ತಂತಿ ಗೋಪುರಗಳನ್ನು ಅಳವಡಿಸುವಾಗ ಅನುಭವಿಸುತ್ತಿರುವ ತೊಂದರೆಗಳು ಹಾಗೂ ಉಲ್ಲೇಖ 3 ರ ಸುತ್ತೋಲೆಯ ಷರತ್ತುಗಳ ಸಂಖ್ಯೆ 2 ಮತ್ತು 5 ರಿಂದಾಗುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆ.

ಮೆ: ರಿಲಾಯನ್ಸ್ ಇನ್‌ಫೋಕಾಂ ರವರ ಕೋರಿಕೆಯನ್ನು ಪರಿಶೀಲಿಸಿ ದಿನಾಂಕ 12-11-2001 ರ ಸುತ್ತೋಲೆಗೆ ಕೆಳಕಂಡ ಪರಿಷ್ಕೃತ ಷರತ್ತುಗಳನ್ನು ನಿಗದಿಪಡಿಸಲು ನಿರ್ಧರಿಸಿದೆ.

1) ಕಂಪೆನಿಯು ಕಟ್ಟಡಗಳ ಮೇಲ್ಛಾವಣಿಗಳ ಮೇಲೆ ಯಾವುದೇ ಜನರೇಟರ್‌ಗಳನ್ನು ಇಡಬಾರದು/ಅಳವಡಿಸಬಾರದು.

ಕರ್ನಾಟಕ ಸರ್ಕಾರ

ಸಂ.ನಅಇ 49 ಎಂಎಂಸಿ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 4.6.2005.

ಸುತ್ತೋಲೆ

ವಿಷಯ: ಬಹೋಪಯೋಗಿ ಮತ್ತು ಬಹು ಅಂತಸ್ತುಗಳ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡುವಾಗ ಅಗ್ನಿ ಶಾಮಕ ಇಲಾಖೆಯಿಂದ ನಿರಾಪೇಕ್ಷಣಾ ಪತ್ರ ಪಡೆಯುವ ಬಗ್ಗೆ

*****

ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬಹೋಪಯೋಗಿ ಮತ್ತು ಬಹು ಅಂತಸ್ತುಗಳ ಕಟ್ಟಡಗಳು, ಮಲ್ಟಿಪೆಕ್ಸ್ ಸಿನಿಮಾ ಮಂದಿರಗಳ ನಿರ್ಮಾಣಗಳಿಗೆ ಮಹಾನಗರ ಪಾಲಿಕೆಗಳು ಅನುಮತಿ ನೀಡುವ ಸಂದರ್ಭದಲ್ಲಿ ರಾಷ್ಟ್ರೀಯ ಕಟ್ಟಡ ಕೋಡ್ ಹಾಗೂ ಕಟ್ಟಡ ಉಪ ವಿಧಿಗಳ ಪ್ರಕಾರ 4 ಅಂತಸ್ತುಗಳಿಗಿಂತ ಹೆಚ್ಚಿನ ಎತ್ತರದ ಕಟ್ಟಡಗಳ ಸುತ್ತ 13 ಮೀಟರ್‌ಗಳ ಖಾಲಿ ಜಾಗ ಕಡ್ಡಾಯವಾಗಿ ಬಿಟ್ಟಿರಬೇಕಾಗುತ್ತದೆ ಮತ್ತು ಅಗ್ನಿ ಶಾಮಕ ಇಲಾಖೆಯ ನಿರಾಪೇಕ್ಷಣಾ ಪತ್ರವನ್ನು ಕಡ್ಡಾಯವಾಗಿ ಪಡೆದ ನಂತರವಷ್ಟೇ ಇಂತಹ ಕಟ್ಟಡಗಳಿಗೆ ಅನುಮತಿ ಪತ್ರಗಳನ್ನು ನೀಡಬೇಕೆಂದಿದ್ದರೂ ಇದನ್ನು ಉಲ್ಲಂಘಿಸಿ ಕಟ್ಟಡ ಪರವಾನಿಗೆಗಳನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.ಆದ್ದರಿಂದ ಎಲ್ಲಾ ಮಹಾನಗರ ಪಾಲಿಕೆಗಳು ಬಹು ಉಪಯೋಗಿ ಮತ್ತು ಬಹು ಅಂತಸ್ತುಗಳ ಕಟ್ಟಡಗಳ ನಿರ್ಮಾಣಕ್ಕೆ ಪರವಾನಗಿ ನೀಡುವಾಗ ರಾಷ್ಟ್ರೀಯ ಕಟ್ಟಡ ಕೋಡ್‌ಗೆ ಮತ್ತು ಕಟ್ಟಡ ಉಪವಿಧಿಗಳಿಗೆ ಅನುಗುಣವಾಗಿ ಅನುಮತಿ ಪತ್ರಗಳನ್ನು ನೀಡುವ ಮುನ್ನ ಕರ್ನಾಟಕ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ನಿರಾಪೇಕ್ಷಣಾ ಪತ್ರವನ್ನು ಕಡ್ಡಾಯವಾಗಿ ಪಡೆದುಕೊಂಡು ಅಂತಹ ಅನುಮತಿ ಪತ್ರಗಳನ್ನು ನೀಡುವಂತೆ ಕಟ್ಟುನಿಟ್ಟಿನ ಸೂಚನೆಗಳನ್ನು ಈ ಮೂಲಕ ನೀಡಲಾಗಿದೆ.

ಇದರಿಂದ ಬಹು ಅಂತಸ್ತುಗಳ ಕಟ್ಟಡಗಳಲ್ಲಿ ಅಗ್ನಿ ಆಕಸ್ಮಿಕಗಳು ಉಂಟಾದರೆ ಆಗುವ ಅಪಾರ ಜೀವ ಹಾನಿ ಆಸ್ತಿ ಹಾನಿಗಳನ್ನು ತಪ್ಪಿಸಲು, ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ.

(ಎಸ್.ಜೆ.ಸಂಪತ್‌ಕುಮಾರ್), 4/6/05
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
04/06/05

ಗೆ:

1) ಪೊಲೀಸ್ ಮಹಾ ನಿರ್ದೇಶಕರು, ಮತ್ತು ನಿರ್ದೇಶಕರು, ಕರ್ನಾಟಕ ಅಗ್ನಿ ಮತ್ತು ತುರ್ತು ಸೇವೆಗಳು, ನಂ.1 ಅಣ್ಣಾಸ್ವಾಮಿ, ಮೊದಲಿಯಾರ್ ರಸ್ತೆ,ಬೆಂಗಳೂರು-42.
2) ಆಯುಕ್ತರು,ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
3) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
4) ಆಯುಕ್ತರು, ಎಲ್ಲಾ ಮಹಾನಗರ ಪಾಲಿಕೆಗಳು. 13 Nos
5) ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು
6) ಪೌರಾಯುಕ್ತರು:ಮುಖ್ಯಾಧಿಕಾರಿಗಳು ಎಲ್ಲಾ ನಗರಸಭೆಗಳು:ಪುರಸಭೆಗಳು(ಪೌರಾಡಳಿತ ನಿರ್ದೇಶನಾಲಯ ಮುಖಾಂತರ).
7) ಎಲ್ಲಾ ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
8) ಶಾಖಾ ರಕ್ಷಾ ಕಡತ.

39 (42)

ಕರ್ನಾಟಕ ಸರ್ಕಾರದ ಸಚಿವಕ್ಷಿಗಳು

ವಿಷಯ: ಖಾಸಗಿ ಬಡಾವಣೆಗಳನ್ನು ರಚಿಸುವ ಸಂದರ್ಭದಲ್ಲಿ ನಗರ ಅಭಿವೃದ್ಧಿ ಪ್ರಾಧಿಕಾರಗಳು ವಿಧಿಸುತ್ತಿರುವ ಮೌಲ್ಯಮಾಪನ ಶುಲ್ಕ ಕುರಿತು.

ಓದಲಾಗಿದೆ: ಸುತ್ತೋಲೆ ಸಂಖ್ಯೆ: ಕೆಹಿಂಮಂಪ್ರಾ 22 ಬಿಟಿಬಿ 89(ಭಾ-2), ದಿನಾಂಕ: 13-2-1990.

ಪ್ರಸ್ತಾವನೆ:

ಮೇಲ್ಕಂಡ (1)ರಲ್ಲಿ ನಗರ ಅಭಿವೃದ್ಧಿ ಪ್ರಾಧಿಕಾರಗಳು ಖಾಸಗಿ ಬಡಾವಣೆಗಳಿಗೆ ಅನುಮತಿಸುವಾಗ ಕಾವಲುಗಾರರಿಗಳ ಅಂದಾಜು ವೆಚ್ಚದ ಶೇಕಡ 9ರಷ್ಟು ಮೌಲ್ಯಮಾಪನಾ ದರವನ್ನು ನಿಗದಿಪಡಿಸಿದೆ. ನಗರ ಅಭಿವೃದ್ಧಿ ಪ್ರಾಧಿಕಾರಗಳು ಖಾಸಗಿ ಬಡಾವಣೆ ರಚನೆಯಲ್ಲಿ ಒಟ್ಟಾಪುಡೇ ನೆರವನ್ನು ನೀಡುವುದಿಲ್ಲ ಬದಲಾಗಿ ಅನುಮೋದಿತ ಯೋಜನೆಯಂತೆ ಬಡಾವಣೆಗಳಲ್ಲಿ ವಿವಿಧ ಅಭಿವೃದ್ಧಿ ಕಾವಲುಗಾರರಿಗಳ ಕಾರ್ಯಗತಗೊಳಿಸುವುದನ್ನು ಪರಿಶೀಲಿಸುವ ಮೌಲ್ಯಮಾಪನ ಮಾಡುತ್ತದೆ. ಆದುದರಿಂದ, ಮೌಲ್ಯಮಾಪನಾ ಶುಲ್ಕವಾಗಿ ಈಗ ವಿಧಿಸುತ್ತಿರುವ ಶೇಕಡ 9ರಷ್ಟು ದರವು ಪ್ರಸ್ತುತ ಸನ್ನಿವೇಶದಲ್ಲಿ ಉತ್ತೇಜನಕಾರಿ ಅಲ್ಲವೆಂದು ಸರ್ಕಾರವು ಗಮನಿಸಿದೆ.

ತದ್ದರಿಂದ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ರಾಜ್ಯದ ಇತರೆ ಅಭಿವೃದ್ಧಿ ಪ್ರಾಧಿಕಾರಗಳಿಗೆ ಅನ್ವಯವಾಗುವಂತೆ ಮೌಲ್ಯಮಾಪನಾ ಶುಲ್ಕ ದರವನ್ನು ಶೇಕಡ 4ಕ್ಕೆ ಇಳಿಸಲು ನಿರ್ಧರಿಸಿದೆ. ಅದರಂತೆ, ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ನಅಇ 1025 ಬಿಂಭಪ್ರಾಸ್ವಾ 2003, ಬೆಂಗಳೂರು, ದಿ: 09-06-2005.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ರಾಜ್ಯದ ವಿವಿಧ ಅಭಿವೃದ್ಧಿ ಪ್ರಾಧಿಕಾರಗಳು ಖಾಸಗಿ ಬಡಾವಣೆಗಳಿಗೆ ಅನುಮತಿಸುವಾಗ ಕಾವಲುಗಾರರಿಗಳ ಅಂದಾಜು ವೆಚ್ಚದ ಮೇಲೆ ವಿಧಿಸುತ್ತಿರುವ ಶೇಕಡ 9ರಷ್ಟು ಮೌಲ್ಯಮಾಪನಾ ಶುಲ್ಕವನ್ನು ಇಳಿಸಿ ಶೇಕಡ 4ಕ್ಕೆ ನಿಗದಿಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ.ತಿರ.ಇಲಕ್ಕಿ) 7/6/05
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:
1) ಆಯುಕ್ತರು, ಬೆಂಗಳೂರು ಮಹಾನಗರ ಪ್ರಾಧಿಕಾರ, ಬೆಂಗಳೂರು.
2) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
3) ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
4) ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
5) ನಿರ್ದೇಶಕರು, ಪ್ರಾದೇಶಿಕ ನಿರ್ದೇಶನಾಲಯ, ವಿಶೇಷಾಧಿಕಾರಿಯವರು, ಗೋಪಾಲಪುರ, ಬೆಂಗಳೂರು.
6) ಅಧ್ಯಕ್ಷರು, ಎಲ್ಲಾ ಅಭಿವೃದ್ಧಿ ಪ್ರಾಧಿಕಾರಗಳು.
7) ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳ ಉಪ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಉಪ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9) ಸರ್ಕಾರದ ಕಾರ್ಯದರ್ಶಿಯವರ ಉಪ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10) ಉಪ ಕಾರ್ಯದರ್ಶಿ-1 ಮತ್ತು 2 ಇವರ ಉಪ ಸಕಾರ್ಯಕರು, ನಗರಾಭಿವೃದ್ಧಿ ಇಲಾಖೆ.
11) ಆಯುಕ್ತರು, ನಗರಸಭೆ, ಬ್ಯಾಟರಾಯನಪುರ: ಬೆಂಗಳೂರು ಉತ್ತರ: ರಾಜರಾಜೇಶ್ವರಿ ನಗರ: ಮಹದೇವಪುರ: ಧಾನರಕ್ಷಿ: ಯಲಹಂಕ: ಕೆ.ಆರ್.ಪುರ, ಬೆಂಗಳೂರು.

ಕರ್ನಾಟಕ ಸರ್ಕಾರ

37
40

ಸಂಖ್ಯೆ:ನಅಇ 123 ಬೆಂರೂಪ್ರಾ 2005.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:14-06-2005.

ಸು ತ್ತೋ ಲೆ

ಸರ್ಕಾರವು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ನಿಯಮ (ನಿವೇಶನ ಹಂಚಿಕೆ)ಗಳು 1991ಕ್ಕೆ ತಿದ್ದುಪಡಿ ತಂದಿದ್ದು, ಈ ನಿಯಮಗಳು ದಿನಾಂಕ:23-5-2005 ರಿಂದ ಜಾರಿಗೆ ಬಂದಿದ್ದು, ಅದರಲ್ಲಿನ ಉಪಬಂಧಗಳು ಈ ಕೆಳಕಂಡಂತಿವೆ:-

1) ಪ್ರಾಧಿಕಾರದಿಂದ ಹಂಚಿಕೆಯಾದ ನಿವೇಶನವು 10 ವರ್ಷಗಳ ಕಾಲ ಗುತ್ತಿಗೆ ಅವಧಿಯಲ್ಲಿರುತ್ತದೆ. ಈ ಸಂಬಂಧ ಪ್ರಾಧಿಕಾರದಿಂದ ಹಂಚಿಕೆ ಪತ್ರ ಪಡೆದ ನಂತರ ಹಂಚಿಕೆದಾರರು ಗುತ್ತಿಗೆ ಮಾರಾಟ ಹಾಗೂ ಒಪ್ಪಂದದ ನಮೂನೆ-III ರಲ್ಲಿ 90 ದಿನಗಳ ಒಳಗಾಗಿ ಪೂರೈಸತಕ್ಕದ್ದು. ನಿಗದಿತ ಅವಧಿಯಲ್ಲಿ ಈ ನಮೂನೆಯನ್ನು ಪೂರೈಸಲು ವಿಫಲವಾದಲ್ಲಿ, ನಿವೇಶನದ ಹಂಚಿಕೆಯನ್ನು ರದ್ದುಗೊಳಿಸಲಾಗುವುದು.

2) ಗುತ್ತಿಗೆ ಮಾರಾಟ ಒಪ್ಪಂದವನ್ನು ಪೂರೈಸಿದ ದಿನಾಂಕದಿಂದ 5 ವರ್ಷಗಳ ಒಳಗಾಗಿ ಹಂಚಿಕೆದಾರರು ನಿವೇಶನದಲ್ಲಿ ಕಟ್ಟಡವನ್ನು ನಿರ್ಮಿಸತಕ್ಕದ್ದು. 5 ವರ್ಷಗಳ ಅವಧಿಯೊಳಗೆ ಕಟ್ಟಡವನ್ನು ಕಟ್ಟದಿದ್ದರೆ ನಿವೇಶನದ ಹಂಚಿಕೆಯನ್ನು ರದ್ದುಗೊಳಿಸಿ, ನಿವೇಶನವನ್ನು ಪ್ರಾಧಿಕಾರವು ಪುನ: ತನ್ನ ವಶಕ್ಕೆ ಪಡೆಯತಕ್ಕದ್ದು.

3) ಯಾವುದೇ ವ್ಯಕ್ತಿಗೆ ಯಾವುದಾದರೂ ರಾಜ್ಯದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗೃಹ ಮಂಡಳಿ ಅಥವಾ ಸರ್ಕಾರಿ ಏಜೆನ್ಸಿ ವತಿಯಿಂದ ರಾಜ್ಯದ ಯಾವುದೇ ಭಾಗದಲ್ಲಿ ನಿವೇಶನ ಹಂಚಿಕೆಯಾಗಿದ್ದರೆ ಅಂತಹ ವ್ಯಕ್ತಿಯು ಮತ್ತೊಮ್ಮೆ ನಿವೇಶನ ಹಂಚಿಕೆಗೆ ಅರ್ಹನಾಗಿರುವುದಿಲ್ಲ.

4) ಯಾವುದೇ ಒಬ್ಬ ಹಂಚಿಕೆದಾರನು ನಿವೇಶನವನ್ನು ಮಾರಲು ಸಾಧ್ಯವಿರುವುದಿಲ್ಲ. ಆದರೆ ಹಂಚಿಕೆದಾರನು ನಿವೇಶನವನ್ನು ಪ್ರಾಧಿಕಾರಕ್ಕೆ ಅಧ್ಯರ್ಪಿಸಬಹುದಾಗಿರುತ್ತದೆ. ಈ ರೀತಿ ಅಧ್ಯರ್ಪಿಸಿದ ನಂತರ ಗುತ್ತಿಗೆದಾರರು ಪ್ರಾಧಿಕಾರಕ್ಕೆ ಪಾವತಿಸಿರುವ ನಿವೇಶನ ಮೌಲ್ಯವನ್ನು ಶೇಕಡ 12 ರಂತೆ ವಾರ್ಷಿಕ ಬಡ್ಡಿಯೊಂದಿಗೆ ಪ್ರಾಧಿಕಾರವು ಗುತ್ತಿಗೆದಾರರಿಗೆ ಸಂದಾಯ ಮಾಡತಕ್ಕದ್ದು. ಗುತ್ತಿಗೆದಾರರು ತಮಗೆ ಹಂಚಿಕೆಯಾದ ನಿವೇಶನವನ್ನು ಹಣಕಾಸು ಸಂಸ್ಥೆಗೆ ಅಥವಾ ಸರ್ಕಾರಕ್ಕೆ ಅಡಮಾನವಿಟ್ಟು ಕಟ್ಟಡ ಕಟ್ಟುವ ಸಂಬಂಧ ಸಾಲವನ್ನು ಪಡೆಯಬಹುದಾಗಿದೆ.

5) ಗುತ್ತಿಗೆದಾರರು ಹಂಚಿಕೆಯಾದ ನಿವೇಶನದಲ್ಲಿ ಕಟ್ಟಿರುವ ಕಟ್ಟಡವನ್ನು ಗುತ್ತಿಗೆ ಅವಧಿಯ 10 ವರ್ಷಗಳ ಅವಧಿಯಲ್ಲಿ ಮಾರಾಟ ಮಾಡಲು ಇಚ್ಛಿಸಿದಲ್ಲಿ, ಗುತ್ತಿಗೆದಾರರಿಂದ ನಿವೇಶನ ಮೌಲ್ಯವನ್ನು ಶೇಕಡ 12 ರಂತೆ ವಾರ್ಷಿಕ ಬಡ್ಡಿಯೊಂದಿಗೆ ಪ್ರಾಧಿಕಾರಕ್ಕೆ ಸಂದಾಯಿಸಿದ್ದಲ್ಲಿ, ಕಟ್ಟಡವನ್ನು ಮಾರಲು ಪ್ರಾಧಿಕಾರವು ಅನುಮತಿಸಬಹುದಾಗಿರುತ್ತದೆ.

(ಶಾಂತಾರಾಂ ನಾಯ್ಕ್)
ಸರ್ಕಾರದ ಅಧೀನ ಕಾರ್ಯದರ್ಶಿ, (ಪ್ರಭಾರ)
ನಗರಾಭಿವೃದ್ಧಿ ಇಲಾಖೆ.

ಗೆ:
ಆಯುಕ್ತರು,
ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.

To:

The Compiler, Karnataka Gazette, Bangalore, with a request to publish this Notification in Extra-ordinary Gazette and send 500 copies to the Urban Development Department.

Copy to:

1) Inspector General of Stamps and Registration, Cauvery Bhavan, Bangalore.
2) The Director of Town Planning, Bangalore.
3) The Commissioners of all Development Authorities.
4) P.S. to Principal Secretary to Govt., Urban Dev. Dept.
5) P.S. to Secretary to Govt., Urban Dev. Dept.
6) Secretary to Hon'ble Chief Minister for information.
7) SGF/ Spare Copies.

2) ಅನುಮೋದಿತ ಓ.ಡಿ.ಪಿ/ಸಿ.ಡಿ.ಪಿ ಯಲ್ಲಿನ ವಲಯ ನಿಯಮಾವಳಿಗಳಲ್ಲಿ ಭೂ ಪ್ರದೇಶದ ಮೇಲ್ಭಾಗದಲ್ಲಿ ದೂರ ಸಂಪರ್ಕ ಉಪಕರಣಗಳು, ಬೇಸ್ ಟ್ರಾನ್ಸ್ ರಿಸೀವರ್ ಸ್ಟೇಷನ್, ತಂತಿ ಗೋಪುರಗಳಿಗೆ ವಸತಿ ವಾಣಿಜ್ಯ/ಕೈಗಾರಿಕೆ/ವ್ಯವಸಾಯ/ಹಸಿರು ವಲಯಗಳಲ್ಲಿ ಇವುಗಳು ಬರಲು ಅನುಮತಿಸತಕ್ಕದ್ದು. ಇಂತಹ ಚಟುವಟಿಕೆಗಳು ಕೆರೆ ಪ್ರದೇಶ, ಉದ್ಯಾನವನ, ಬಡಾವಣೆಗಳಲ್ಲಿ ಕಾಯ್ದಿರಿಸಿರುವ ಬಯಲು ಜಾಗ ರಿಕಿಯೇಷನಲ್ ಉಪಯೋಗಗಳು ಹಾಗೂ ಓ.ಡಿ.ಪಿ/ಸಿ.ಡಿ.ಪಿ ಯಲ್ಲಿ ಪ್ರಸ್ತಾಪಿಸಲಾದ ರಸ್ತೆ ಜಾಗಗಳಿಗೆ ಅನುಮತಿಸತಕ್ಕದ್ದಲ್ಲ.

3) ಕಂಪೆನಿಯು ದೂರಸಂಪರ್ಕ ಉಪಕರಣಗಳು/ಬೇಸ್ ಟ್ರಾನ್ಸ್ ರಿಸೀವರ್ ಸ್ಟೇಷನ್/ತಂತಿ ಗೋಪುರಗಳ ಭಾರವನ್ನು ಕಟ್ಟಡಗಳು ತಡೆದುಕೊಳ್ಳುವ ಬಗ್ಗೆ ನೋಂದಾಯಿತ ಅಭಿಯಂತರರಿಂದ ಪ್ರಮಾಣ ಪತ್ರ ಒದಗಿಸಬೇಕು.

4) ಭಾರತ ಸರ್ಕಾರದ ಪರ್ಯಾವರಣ/ಅರಣ್ಯ ಮಂತ್ರಾಲಯವು ಅಧಿಸೂಚನೆ ಸಂಖ್ಯೆ : ಎಸ್.ಒ 123 (ಇ) ದಿನಾಂಕ 14-02-2000 ರಂತೆ ವಿದ್ಯುತ್ ಯಂತ್ರದಿಂದ ಹೊರಹೊಮ್ಮುವ ಶಬ್ದ ನಿಗದಿಪಡಿಸಿರುವ ಪರಿಮಿತಿಯೊಳಗೆ ಇರಬೇಕೆನ್ನುವ ಬಗ್ಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರವನ್ನು ಕಂಪೆನಿ ಒದಗಿಸತಕ್ಕದ್ದು.

5) ಭೂ ಪ್ರದೇಶದ ಮೇಲೆ ಅಳವಡಿಸುವ ಉಪಕರಣಗಳು/ಬೇಸ್ ಟ್ರಾನ್ಸ್ ರಿಸೀವರ್ ಸ್ಟೇಷನ್/ತಂತಿ ಗೋಪುರಗಳನ್ನು ಮೂಲಭೂತ ಸೌಕರ್ಯಗಳೆಂದು ಪರಿಗಣಿಸತಕ್ಕದ್ದು. ಹಾಗೂ ನಿರಾಕ್ಷೇಪಣಾ ಪತ್ರ ನೀಡುವಾಗ ಅಂತಹ ಕ್ಷೇತ್ರಕ್ಕೆ ನಿಗದಿಪಡಿಸಿದ ಶುಲ್ಕವನ್ನು ವಿಧಿಸಸತಕ್ಕದ್ದು.

(ಎಸ್. ಜೆ. ಸಂಪತ್‌ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಗೆ :

1. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
2. ನಗರ ಯೋಜನಾ ನಿರ್ದೇಶಕರು, ಬೆಂಗಳೂರು
3. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರುಗಳು
4. ಎಲ್ಲಾ ನಗರಸಭೆಗಳ ಆಯುಕ್ತರುಗಳು
5. ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರುಗಳು
6. ಎಲ್ಲಾ ಪಟ್ಟಣ ಪಂಚಾಯತಿ/ಪುರಸಭೆಗಳ ಮುಖ್ಯಾಧಿಕಾರಿಗಳು
7. ಎಲ್ಲಾ ನಗರ ಯೋಜನಾ ಸಹಾಯಕ ನಿರ್ದೇಶಕರುಗಳು
8. ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳ ಸದಸ್ಯ-ಕಾರ್ಯದರ್ಶಿಗಳು
9. ನಗರಾಭಿವೃದ್ಧಿ ಇಲಾಖೆಯ ಎಲ್ಲಾ ಅಧೀನ ಕಾರ್ಯದರ್ಶಿಗಳು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಆಪ್ತಕಾರ್ಯದರ್ಶಿಗಳು.
11. ಸರ್ಕಾರದ ಕಾರ್ಯದರ್ಶಿಗಳು, ಮಾಹಿತಿ ತಂತ್ರಜ್ಞಾನ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

3. ನಗರಾಭಿವೃದ್ಧಿ ಪ್ರಾಧಿಕಾರಗಳು ಅವರಲ್ಲಿರತಕ್ಕ ಸಂಪನ್ಮೂಲಗಳನ್ನು ಮತ್ತು ಹಮ್ಮಿಕೊಂಡ ವಿವಿಧ ಯೋಜನೆಗಳ ನಿವೇಶನಗಳಿಗೆ ಬೇಡಿಕೆ ಯನ್ನು ಆಧರಿಸಿ ಯೋಜನೆ ರೂಪಿಸಬೇಕಾಗುತ್ತದೆ. ಬಹುತೇಕ ಪ್ರಕರಣಗಳನ್ನು ಇವರೆಡನ್ನೂ ಆಧರಿಸಿ ಯೋಜನೆಗಳನ್ನು ರೂಪಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಹಾಗಾಗಿ, ನಿವೇಶನಗಳಿಗೆ ಇರತಕ್ಕ ಬೇಡಿಕೆಯನ್ನು ವೈಜ್ಞಾನಿಕವಾಗಿ ಮೂಡಿ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿರತಕ್ಕ ಸಂಪನ್ಮೂಲಗಳನ್ನು ಆಧರಿಸಿ ಭೂ ಸ್ವಾಧೀನ ಪಡಿಸಿಕೊಂಡು ಯೋಜನೆ ರೂಪಿಸುವುದು ಸೂಕ್ತವಾಗಿದೆ. ಈ ರಿನೆ ಯಲ್ಲಿ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು ಪ್ರಯತ್ನಶೀಲರಾಗಬೇ ವುದು ಸೂಕ್ತ.

4. ಯೋಜನೆ ಪ್ರಸ್ತಾವನೆಗಳನ್ನು ಸರ್ಕಾರದ ಅನುಮೋದನೆಗೆ ಕಳುಹಿಸುವಾಗ ಕರ್ನಾಟಕ ನಗರಾಭಿವೃದ್ಧಿ ಕಾಂಪೊಂದಿಯ ಕಲಂಗಳನ್ನು ಸಂಪೂರ್ಣವಾಗಿ ನಗರಾಭಿವೃದ್ಧಿ ಪ್ರಾಧಿಕಾರಗಳು ಅನುಸರಿಸುತ್ತಿಲ್ಲ. ಉದಾಹರಣೆಗಾಗಿ ಇದೇ ಅಧಿಸೂಚನೆಗಳನ್ನು ಕಳುಹಿಸಿಕೊಡಲಾಗಿರುವ ಬಗ್ಗೆ ಮತ್ತು 17(4) ರನ್ವಯ ಸ್ಥಳೀಯ ಸಂಸ್ಥೆಗಳಿಂದ ಋಣ ನಿರೂಪಣೆಯ ಸ್ವೀಕೃತವಾದ ಬಗ್ಗೆ ಮೂಡಿಸಿದಗಳನ್ನು ಕಳುಹಿಸಿಕೊಡಲಾಗುತ್ತಿಲ್ಲ. ಇದರಿಂದ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮಗಳನ್ನು ಮತ್ತು ಯೋಜನೆ ತಯಾರಿಸಿ ಸರ್ಕಾರದ ಅನುಮೋದನೆ ಪಡೆಯಲು ಅನುಸರಿಸಬೇಕಾದ ಕ್ರಮದ ಕುರಿತು ಸರ್ಕಾರವು ಈ ಕೆಳಗಿನ ಸುತ್ತೋಲೆಗಳ ಮೂಲಕ ಮತ್ತು ವಿಷಯಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಇತರ ಸುತ್ತೋಲೆ— ಗಳಲ್ಲಿ ನೀಡಲಾದ ನಿರ್ದೇಶನಗಳನ್ನು ತಪ್ಪದೇ ಅನುಸರಿಸಬಹುದು.

1) ಹೆಚಿಂಯುಡಿ 79 ಎಂಐಬಿ 89 ದಿ:11—9—1990.
2) ನಅಇ 140 ಎಂಐಬಿ 99 ದಿ:3—4—2000.

5. ನಗರಾಭಿವೃದ್ಧಿ ಪ್ರಾಧಿಕಾರಗಳು ಯೋಜನೆಗಳನ್ನು ತಯಾರಿಸುವಾಗ ನಗರ ಯೋಜನಾ ನಿರ್ದೇಶಕರಿಂದಿಗೆ ಸಮಾಲೋಚಿಸಿ ಯೋಜನೆಗಳನ್ನು ತಯಾರಿಸತಕ್ಕದ್ದು. ಹೀಗೆ ನಗರ ಯೋಜನಾ ನಿರ್ದೇಶಕರಿಂದಿಗೆ ಸಮಾಲೋಚನೆ ಮಾಡಿ ತಯಾರಿಸಿದ ಯೋಜನೆಗಳನ್ನು ಅನಗತ್ಯವಾಗಿ ಮೂರ್ಪಾಡು ಮಾಡಬಾರದು.

ತಮ್ಮ ವಿಶ್ವಾಸಿ,

ಸಹಿ:
(ವಿ.ಶ್ರೀಧರಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

:: ನಕಲು ::

ನಂ.ನಂಯೋ:ಅನಿ(ಯೋವಿ)ನಪ್ರಾಯೋ: 75:2003.

ನಗರ ಯೋಜನಾ ನಿರ್ದೇಶಕರ ಕಛೇರಿ,
ಬಹುಮಹಡಿಗಳ ಕಟ್ಟಡ, 4ನೇ ಹಂತ,
ಡಾ:ಅಂಬೇಡ್ಕರ ವೀಧಿ, ಬೆಂಗಳೂರು
ದಿನಾಂಕ: —8—2003

ಯುಕ್ತಾಪ್ರತಿಯನ್ನು:

17 SEP 2003

1) ನಗರ ಯೋಜನಾ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

2) ಕೇಂದ್ರ ಕಛೇರಿಯ ಎಲ್ಲಾ ಪತ್ರಾಂಕಿತ ಅಧಿಕಾರಿಗಳಿಗೆ ಮತ್ತು ತಾಂತ್ರಿಕ ವಿಷಯ ನಿರ್ವಾಹಕರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ನೀಡಲಾಗಿದೆ.

ಕರ್ನಾಟಕ ಸರ್ಕಾರ

ಸಂಖ್ಯೆ : ನಅಇ 49 ಎಂಎಂಸಿ 2005 ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡಗಳು,
ಬೆಂಗಳೂರು, ದಿನಾಂಕ: 17-08-2005

ಸುತ್ತೋಲೆ

ವಿಷಯ: ಬಹುಪಯೋಗಿ ಮತ್ತು ಬಹು ಅಂತಸ್ತುಗಳ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡುವಾಗ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವ ಬಗ್ಗೆ.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 49 ಎಂಎಂಸಿ 2005 ದಿನಾಂಕ 04-06-2005.

***

ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬಹುಪಯೋಗಿ ಮತ್ತು ಬಹು ಅಂತಸ್ತುಗಳ ಕಟ್ಟಡಗಳು, ಮಲ್ಟಿಪ್ಲೆಕ್ಸ್ ಸಿನಿಮಾ ಮಂದಿರಗಳ ನಿರ್ಮಾಣಗಳಿಗೆ ಮಹಾನಗರ ಪಾಲಿಕೆಗಳು ಅನುಮತಿ ನೀಡುವ ಸಂದರ್ಭದಲ್ಲಿ ರಾಷ್ಟ್ರೀಯ ಕಟ್ಟಡ ಕೋಡ್ ಹಾಗೂ ಕಟ್ಟಡ ಉಪವಿಧಿಗಳನ್ವಯ ನೆಲ+4 ಅಂತಸ್ತುಗಳು ಅಥವಾ 15 ಮೀಟರ್‌ಗಿಂತ ಎತ್ತರದ ಕಟ್ಟಡಗಳ ಸುತ್ತ 13 ಮೀಟರ್‌ಗಳ ಖಾಲಿ ಜಾಗ ಕಡ್ಡಾಯವಾಗಿ ಬಿಡತಕ್ಕದ್ದು ಮತ್ತು ಅಗ್ನಿಶಾಮಕ ಇಲಾಖೆಯ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆದ ನಂತರವಷ್ಟೇ ಇಂತಹ ಕಟ್ಟಡಗಳಿಗೆ ಅನುಮತಿ ಪತ್ರಗಳನ್ನು ನೀಡಬೇಕೆಂದಿದ್ದರೂ ಸಹ ಇದನ್ನು ಉಲ್ಲಂಘಿಸಿ ಕಟ್ಟಡ ಪರವಾನಿಗೆಗಳನ್ನು ನೀಡುತ್ತಿರುವುದನ್ನು ಸರ್ಕಾರವು ಗಮನಿಸಿ ಉಲ್ಲೇಖದಲ್ಲಿನ ಸುತ್ತೋಲೆಯಲ್ಲಿ ಈ ಕುರಿತು ಅನುಸರಿಸಬೇಕಾದ ಕ್ರಮದ ಬಗ್ಗೆ ಸೂಚನೆ ನೀಡಲಾಗಿತ್ತು.

ಸದರಿ ಸುತ್ತೋಲೆಯಲ್ಲಿನ ಕೆಲವು ಅಂಶಗಳನ್ನು ಭಾಗಶ: ಮಾರ್ಪಡಿಸಿ ಕೆಳಕಂಡಂತೆ ನಿರ್ದೇಶನ ನೀಡಲಾಗಿದೆ.

ನೆಲ+4 ಅಂತಸ್ತುಗಳು ಅಥವಾ 15 ಮೀಟರ್‌ಗಿಂತ ಎತ್ತರದ ಕಟ್ಟಡಗಳನ್ನು ಬಹುಮಹಡಿ/ಬಹುಅಂತಸ್ತು ಕಟ್ಟಡ ಎಂದು ಪರಿಗಣಿಸಬೇಕಾಗಿದ್ದು, ಇಂತಹ ಕಟ್ಟಡಗಳಲ್ಲಿ ಅಗ್ನಿ ಆಕಸ್ಮಿಕಗಳು ಉಂಟಾದರೆ ಅಪಾರ ಜೀವ ಹಾನಿ, ಆಸ್ತಿ ಹಾನಿಗಳು ಆಗುವ ಸಾಧ್ಯತೆ ಇದ್ದು ಈ ಸಂಬಂಧ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ ಇಂತಹ ಕಟ್ಟಡಗಳ ಸುತ್ತ ಆಯಾ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಗೊಂಡ ಮಹಾ ಯೋಜನೆ (ಸ್ಥಳಾಭಿವೃದ್ಧಿ ಯೋಜನೆ/ವ್ಯಾಪಾರಾಭಿವೃದ್ಧಿ

.....2

ಯೋಜನೆ/ಪರಿಷ್ಕೃತ ಬ್ಯಾಪಕಾಭಿವೃದ್ಧಿ ಯೋಜನೆ)ಯಲ್ಲಿನ ವಲಯ ನಿಯಮಾವಳಿಯಂತೆ ನಡು ಜಾಗ ನಿಗದಿಪಡಿಸಿ ಕಟ್ಟಡ ನಕ್ಷೆಗೆ ಅನುಮೋದನೆ ನೀಡಲಕ್ಕದ್ದು. ಅನುಮೋದಿತ ವಲಯ ನಿಯಮಾವಳಿಯಲ್ಲಿ ಕರ್ನಾಟಕ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವಂತೆ ನಿಬಂಧನೆಯಿದ್ದಲ್ಲಿ ಅದನ್ನು ಪಡೆದ ನಂತರವಷ್ಟೇ ಕಟ್ಟಡ ನಕ್ಷೆಗೆ ಅನುಮೋದನೆ ನೀಡುವುದು. ಅಂತಹ ನಿಬಂಧನೆ ವಲಯ ನಿಯಮಾವಳಿಯಲ್ಲಿ ಇಲ್ಲದಿದ್ದಲ್ಲಿ ಎಲ್ಲಾ ರೀತಿಯ ಅಗ್ನಿ ನಿವಾರಣೆ ಹಾಗೂ ಅಗ್ನಿ ಶಮನ ಉಪಕರಣಗಳನ್ನು ಕಟ್ಟಡ ನಕ್ಷೆಯಲ್ಲಿ ಅಳವಡಿಸಿರುವ ಬಗ್ಗೆ ಮಾತ್ರ ನಿರಾಕ್ಷೇಪಣಾ ಪತ್ರ ಪಡೆದು ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ ನೀಡಲು ಕಟ್ಟುನಿಟ್ಟಿನ ಸೂಚನೆಗಳನ್ನು ಈ ಮೂಲಕ ನೀಡಲಾಗಿದೆ.

ಅಗ್ನಿ ಶಾಮಕ ಇಲಾಖೆಯು ಅವರ ಕಛೇರಿಯಲ್ಲಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಮೇಲ್ಕಂಡಂತೆ ನಿರಾಕ್ಷೇಪಣಾ ಪತ್ರ ನೀಡಲಕ್ಕದ್ದು. ಸದರಿ ಅವಧಿಯಲ್ಲಿ ನಿರಾಕ್ಷೇಪಣಾ ಪತ್ರ ನೀಡದಿದ್ದಲ್ಲಿ, ಸ್ಥಳೀಯ ಸಂಸ್ಥೆಗಳು/ಪ್ರಾಧಿಕಾರಗಳು ಪ್ರಸ್ತಾವಿತ ಕಟ್ಟಡದಲ್ಲಿ ಎಲ್ಲಾ ರೀತಿಯ ಅಗ್ನಿ ನಿವಾರಣ ಹಾಗೂ ಅಗ್ನಿ ಶಮನ ಉಪಕರಣಗಳನ್ನು ಅಳವಡಿಸುವ ಷರತ್ತು ವಿಧಿಸಿ ಅನುಮತಿ ನೀಡಬಹುದು.

(ಎಸ್.ಜಿ. ಸಂಪತ್‌ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಗೆ :

1) ಪೋಲೀಸ್ ಮಹಾನಿರ್ದೇಶಕರು ಮತ್ತು ನಿರ್ದೇಶಕರು, ಕರ್ನಾಟಕ ಅಗ್ನಿ ಮತ್ತು ತುರ್ತು ಸೇವೆಗಳು, ನಂ.1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ, ಬೆಂಗಳೂರು-42.
2) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
3) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
4) ಆಯುಕ್ತರು, ಎಲ್ಲಾ ಮಹಾನಗರ ಪಾಲಿಕೆಗಳು.
5) ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
6) ಪೌರಾಯುಕ್ತರು, ಮುಖ್ಯಾಧಿಕಾರಿಗಳು ಎಲ್ಲಾ ನಗರಸಭೆಗಳು/ಪುರಸಭೆಗಳು (ಪೌರಾಡಳಿತ ನಿರ್ದೇಶನಾಲಯ ಮುಖಾಂತರ)
7) ಎಲ್ಲಾ ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
8) ಕಾಯ್ದಿರಿಸಿದ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ ೧೦೧ ಬೆಂರೂಪ್ರಾ ೨೦೦೫

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: ೧೯.೯.೨೦೦೫.

ಸುತ್ತೋಲೆ

ರಾಜ್ಯದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ವಸತಿ/ ವಾಣಿಜ್ಯ ಹಾಗೂ ಕೈಗಾರಿಕಾ ಕಟ್ಟಡಗಳ ನಿರ್ಮಾಣಕ್ಕೆ ಪರವಾನಗಿ ನೀಡಿದ ನಂತರ ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ಅಥವಾ ಉಲ್ಲಂಘಿಸಿ ಕಟ್ಟಡಗಳನ್ನು ನಿರ್ಮಾಣದ ಮಾಡಿದ ಹಲವಾರು ಪ್ರಕರಣಗಳಲ್ಲಿ ಸಂಬಂಧಿಸಿದ ಅಧಿಕಾರಿಗಳು ನಿಯಮಗಳಡಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಕೆಲವೊಂದು ಪ್ರಕರಣಗಳಲ್ಲಿ ಅಲ್ಲಿನ ಸ್ಥಾಯಿ ಸಮಿತಿಗಳು ಕೈಗೊಂಡ ನಿರ್ಣಯಗಳ ಪೈಕಿ ನಿಯಮಗಳಿಗೆ ವಿರುದ್ಧವಾಗಿರುವ ನಿರ್ಣಯಗಳ ರದ್ದತಿಗೆ ಸರ್ಕಾರಕ್ಕೆ ಅಧಿಕಾರಿಗಳು ಕಳುಹಿಸುತ್ತಿದ್ದಾರೆ. ಬಹುತೇಕ ಪ್ರಕರಣಗಳಲ್ಲಿ ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ಭೂ ಉಪಯೋಗ ಬದಲಾವಣೆ ಪಡೆಯದೇ ಸಿ.ಡಿ.ಪಿ.ಯಲ್ಲಿ ನಿಗಧಿಪಡಿಸಿದ ಭೂ ಉಪಯೋಗದಿಂದ ಇತರೆ ಉಪಯೋಗಕ್ಕಾಗಿ ನಕ್ಷೆ ಮಂಜೂರಾತಿ ನೀಡಲಾಗುತ್ತಿದೆ. ಅಲ್ಲದೇ, ಕಟ್ಟಡಗಳಿಗೆ ಕಂದಾಯ ನಿಗಧಿಪಡಿಸುವಾಗ ಕೆಲವು ಪ್ರಕರಣಗಳಲ್ಲಿ ಮಂಜೂರಾದ ನಕ್ಷೆಗೆ ನಿಯಮಿತವಾಗಿ ಮಾತ್ರ ಕಂದಾಯ ನಿಗಧಿಪಡಿಸುತ್ತಿದ್ದು, ಮಂಜೂರಾದ ನಕ್ಷೆಗಿಂತ ಹೆಚ್ಚಿಗೆ ಕಟ್ಟಡವನ್ನು ಕಟ್ಟಿದ್ದರೆ ಸಹ ಮಂಜೂರಾದ ನಕ್ಷೆಗೆ ಮಾತ್ರ ಕರ ವಿಧಿಸಲಾಗುತ್ತಿದೆ. ಇಂತಹ ಪ್ರಕರಣಗಳಲ್ಲಿ ಅವ್ಯವಹಾರಕ್ಕೆ ಅವಕಾಶ ಕಲ್ಪಿಸಿದಂತಾಗುತ್ತದೆ.

ಇಂತಹ ಪ್ರಕರಣಗಳನ್ನು ತಡೆಗಟ್ಟಲು ಭೂ ಉಪಯೋಗ ನಿಯಮಗಳನ್ನು ಹಾಗೂ ಕಟ್ಟಡ ಉಪವಿಧಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದಲ್ಲದೆ, ನಿರ್ಮಾಣ ಹಂತದಲ್ಲಿಯೇ ಮಂಜೂರಾತಿ ಪಡೆದ ನಕ್ಷೆಗೆ ವ್ಯತಿರಿಕ್ತವಾಗಿ ಅಥವಾ ನಿಯಮಗಳ ಉಲ್ಲಂಘನೆ ಮಾಡಿ ನಿರ್ಮಾಣ ಮಾಡುತ್ತಿರುವುದನ್ನು ಪತ್ತೆ ಹಚ್ಚಿ ತಡೆಹಿಡಿಯಬಹುದಾಗಿದೆ. ಈ ಕುರಿತು ನಿರ್ದೇಶನಗಳು ಇದ್ದರು ಸಹ ಅಧಿಕಾರಿಗಳು ತಮ್ಮ ಕರ್ತವ್ಯಗಳನ್ನು ಸರಿಯಾಗಿ ಪಾಲನೆ ಮಾಡುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸಿ.ಡಿ.ಪಿ. ಯಲ್ಲಿ ನಿರ್ದಿಷ್ಟಪಡಿಸಿರುವ ಉದ್ದೇಶ/ ಉಪಯೋಗದಿಂದ ಸ್ಥಳೀಯ ಪ್ರಾಧಿಕಾರದಿಂದ ಕರ್ನಾಟಕ ನಗರ ಯೋಜನಾ ಕಾಯ್ದೆಯಡಿ ಭೂ ಉಪಯೋಗ ಬದಲಾವಣೆಗೆ ಮಂಜೂರಾತಿ ಇಲ್ಲದೆ ಬೇರೆ ಉದ್ದೇಶ/ ಉಪಯೋಗಕ್ಕಾಗಿ ಕಟ್ಟಡ ನಕ್ಷೆಯನ್ನು ಅನುಮೋದಿಸದಿರಲು ಸೂಚಿಸಲಾಗಿದೆ. ಹಾಗೆ ನಕ್ಷೆಯನ್ನು ಮಂಜೂರು ಮಾಡುವಾಗ ಬಹುಮಹಡಿ ಕಟ್ಟಡದ ಬಗ್ಗೆ ಪ್ರಸ್ತಾಪವಿದ್ದಾಗ (೧೫ ಮೀ.ಗಿಂತಲೂ ಹೆಚ್ಚಿನ ಎತ್ತರದ) ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ಆಕ್ಷೇಪಣಾ ರಹಿತ ಪ್ರಮಾಣ ಪತ್ರ ಪಡೆಯಬೇಕೆಂಬುದನ್ನು ಕಡ್ಡಾಯಗೊಳಿಸಬೇಕೆಂದು ಸಹ ಸೂಚಿಸಿದೆ. ಈ ರೀತಿಯ ಷರತ್ತುಗಳನ್ನು ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳ ವಲಯ ನಿಯಮಾವಳಿಗಳಲ್ಲಿ ಬಿಲ್ಡಿಂಗ್ ಬೈಲಾಗಳಲ್ಲಿ ಅಳವಡಿಸಲಾಗಿದೆ. ಹಾಗಾಗಿ ಕಟಡಗಳ ಹಾಗೂ ಕಟ್ಟಡಗಳನ್ನು ಉಪಯೋಗಿಸುವ/ ವಾಸಿಸುವವರ ಸುರಕ್ಷತೆ ದೃಷ್ಟಿಯಿಂದ ಈ ಅಂಶವನ್ನು ಕಡ್ಡಾಯವಾಗಿ ಹಾಗೂ ಪರಿಣಾಮಕಾರಿಯಾಗಿ ಪಾಲಿಸುವಂತೆ ಈ ಮೂಲಕ ಸೂಚಿಸಿದೆ.

(ಶಾಂತಾರಾಂ ನಾಯಕ್),
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ನಗರಾಭಿವೃದ್ಧಿ ಇಲಾಖೆ.

ಇವರಿಗೆ:

೧. ಪೊಲೀಸ್ ಮಹಾ ನಿರ್ದೇಶಕರು ಹಾಗೂ ನಿರ್ದೇಶಕರು, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ, ನಂ.೧, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ, ಬೆಂಗಳೂರು-೫೨.

೨. ಎಲ್ಲಾ ಜಿಲ್ಲಾಧಿಕಾರಿಗಳು.

೩. ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
೪. ಎಲ್ಲಾ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು.
೫. ಎಲ್ಲಾ ಆಯುಕ್ತರು, ನಗರಸಭೆಗಳು.
೬. ಎಲ್ಲಾ ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿಗಳು.
೭. ಎಲ್ಲಾ ಉಪ ನಿರ್ದೇಶಕರು/ ಸಹಾಯಕ ನಿರ್ದೇಶಕರು, ನಗರ ಯೋಜನಾ ಇಲಾಖೆ, ಎಲ್ಲಾ ಜಿಲ್ಲೆ/ ನಗರಾಭಿವೃದ್ಧಿ ಪ್ರಾಧಿಕಾರ/ ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿಗಳು.
೮. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

ಪ್ರತಿ:

೧. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
೨. ಸರ್ಕಾರದ ಎಲ್ಲಾ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.

43 36

ಕರ್ನಾಟಕ ಸರ್ಕಾರ

ಸಂಖ್ಯೆ.ನಅಇ 398 ಮ್ಯೆಅಪ್ರಾ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು,ದಿನಾಂಕ:01-10-2005.

ಅ ಧಿ ಸೂ ಚ ನೆ

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987ರ (1987ರ ಕರ್ನಾಟಕ ಅಧಿನಿಯಮ ಸಂಖ್ಯೆ:34) 71ನೇ ಪ್ರಕರಣ ಮೂಲಕ ಪ್ರಧತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಕರ್ನಾಟಕ ನಗ್ರಾಭಿವೃದ್ಧಿ ಪ್ರಾಧಿಕಾರದ (ನಿವೇಶನ ಹಂಚಿಕೆ) ನಿಯಮಗಳು 1991ನ್ನು ತಿದ್ದುಪಡಿಮಾಡಲು ಈ ಮೂಲಕ ಈ ಕೆಳಗಿನ ನಿಯಮಗಳನ್ನು ರಚಿಸುತ್ತದೆ.

1. ಹೆಸರು ಮತ್ತು ಪ್ರಾರಂಭ:- (1) ಈ ನಿಯಮಗಳನ್ನು ಕರ್ನಾಟಕ ನಗರಾಭೀವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) (ತಿದ್ದುಪಡಿ) ನಿಯಮಗಳು 2005 ಎಂದು ಕರೆಯತಕ್ಕದ್ದು.
2. ನಿಯಮ 13ರ ತಿದ್ದುಪಡಿ:- ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು 1991ರ 13ನೇ ನಿಯಮದ (2)ನೇ ಉಪನಿಯಮದಲ್ಲಿ :-

(i) ಖಂಡ (ಜಿ) ರ ಬದಲಾಗಿ ಈ ಕೆಳಗಿನದನ್ನು ಪ್ರತ್ಯಾಯೋಜಿಸತಕ್ಕದ್ದು. ಅಂದರೆ
ಖಂಡ (ಜಿ) ಸಾರ್ವಜನಿಕರು (General Public) -ಶೇ.55

(ii) ಖಂಡ (ಜಿ)ರಲ್ಲಿನ ಪ್ರಾಧಿಕಾರದ ವಿವೇಚಾನಾಧಿನ ಕೋಟ. -ರದ್ದುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ಎಸ್.ವೈ.ಸಾಗರ್) 1/10
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಬೀವೃದ್ಧಿ ಇಲಾಖೆ.

307
5/10/05

ಸೆ,
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ಅಧಿಸೂಚನೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ನಗರಾಬಿ ೀವೃದ್ಧಿ ಇಲಾಖೆಗೆ ಕಳುಹಿಸಿಕೊಡಲು ಕೋರಿದೆ.

ಪ್ರತಿಯನ್ನು,
1. ಎಲ್ಲಾ ಜಿಲ್ಲಾಧೀಕಾರಿಗಳಿಗೆ.
2. ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
4. ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರುಗಳಿಗೆ.
5. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನಕಾರ್ಯದರ್ಶಿ,ವಿಧಾನಸೌಧ, ಬೆಂಗಳೂರು.
6. ಮಾನ್ಯ ಪೌರಾಡಳಿತ ಸಚಿವರು ಆಪ್ತ ಕಾರ್ಯದರ್ಶಿ, ವಿಧಾನಸೌದ, ಬೆಂಗಳೂರು.

47

44

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 398 ಮ್ಯುಅಪ್ರಾ 2005 ಕರ್ನಾಟಕ ಸರ್ಕಾರದ ಸಚಿವಾಲಯ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 7-11-2005

ಸುತ್ತೋಲೆ

ಸರ್ಕಾರದ ಆದಿಸೂಚನೆ ಸಂಖ್ಯೆ ನಅಇ 398 ಮ್ಯುಅಪ್ರಾ 2005 ದಿನಾಂಕ 1-10-2005ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ (ನಿವೇಶನ ಹಂಚಿಕೆ), ನಿಯಮಗಳು 1991ನ್ನು ತಿದ್ದುಪಡಿ ಮಾಡಿ ಖಂಡ(ಜೆ)ರಲ್ಲಿನ ಪ್ರಾಧಿಕಾರದ ವಿವೇಚನಾಧಿನ ಕೋಟಾವನ್ನು ರದ್ದು ಪಡಿಸಲಾಗಿರುವುದರಿಂದ ಇನ್ನು ಮುಂದೆ ಯಾವುದೇ ನಗರಾಭಿವೃದ್ಧಿ ಪ್ರಾಧಿಕಾರವು ವಿವೇಚನಾಧಿನ ಕೋಟಾದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಬಾರದೆಂದು ಸೂಚಿಸುತ್ತಾ, ಒಂದು ವೇಳೆ ವಿವೇಚನಾಧಿನ ಕೋಟಾದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿದ್ದಲ್ಲಿ ಸಂಬಂಧಿಸಿದ ಆಯುಕ್ತರ ವಿರುದ್ಧ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗುವುದು.

(ಎನ್.ವೈ.ಸಾಗರ),
ಸರ್ಕಾರದ ಆಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪ್ರತಿಯನ್ನು:

1) ಎಲ್ಲಾ ಜಿಲ್ಲಾಧಿಕಾರಿಗಳಿಗೆ.
2) ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
3) ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರುಗಳಿಗೆ.
4) ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನಕಾರ್ಯದರ್ಶಿ,ವಿಧಾನಸೌಧ, ಬೆಂಗಳೂರು.
5) ಮಾನ್ಯ ಪೌರಾಡಳಿತ ಸಚಿವರು ಅಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6) ಶಾಖಾ ರಕ್ಷಾ ಕಡತ/ ಹೆಚ್ಚಿನ ಪ್ರತಿಗಳು.

10/11
ಕ೦/೨೧/ಬಿ.೨.
೧೦/11

333
11/11/05

ಕಾ.೨/೨೮೨

ಕರ್ನಾಟಕ ಸರ್ಕಾರ

ಸಂಖ್ಯೆ. ನಅಇ 299 ಬಿಂದೂಪ್ರಾ 2006

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 11.8.2006.

ಸುತ್ತೋಲೆ

ವಿಷಯ:– ನಗರಾಭಿವೃದ್ಧಿ ಪ್ರಾಧಿಕಾರಗಳು ಯೋಜನೆ ರೂಪಿಸುವಿಕೆ ಹಾಗೂ ಕಾರ್ಯಾನುಷ್ಠಾನಕ್ಕೆ ತರುವುದರ ಕುರಿತು ವರದಿಯನ್ನು ಪ್ರತಿ ತಿಂಗಳು ಸರ್ಕಾರಕ್ಕೆ ಸಲ್ಲಿಸುವ ಕುರಿತು.

ಉಲ್ಲೇಖ:– ದಿನಾಂಕ: 22.5.2006 ರಂದು ನಡೆದ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾರ್ಯನಿರ್ವಹಣೆ ಪರಿಶೀಲನೆ ಸಭೆಯ ವಿಷಯ ಸಂಖ್ಯೆ. 1(1).

* * * * *

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರಡಿಯಲ್ಲಿ ರಚಿಸಲಾದ ಕೆಲವು ನಗರಾಭಿವೃದ್ಧಿ ಪ್ರಾಧಿಕಾರಗಳು ಇದುವರೆವಿಗೂ ಯಾವುದೇ ಯೋಜನೆಗಳನ್ನು ಕೈಗೊಳ್ಳದೇ ಇರುವುದನ್ನು ಮತ್ತು ಕೆಲವು ನಗರಾಭಿವೃದ್ಧಿ ಪ್ರಾಧಿಕಾರಗಳು ಅನೇಕ ವರ್ಷಗಳ ಹಿಂದೆ ಕೈಗೊಂಡ ಯೋಜನೆಗಳಲ್ಲಿ ನಿವೇಶನಗಳನ್ನು ವಿತರಿಸಲಾಗಿದ್ದರೂ ಅವಶ್ಯಕ ಮೂಲ ಸೌಕರ್ಯಗಳನ್ನು ಒದಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರತಿ ಮಾಹೆಯಾನ ವರದಿಯನ್ನು ಪಡೆದು ಪರಿಶೀಲಿಸಲು ಸರ್ಕಾರವು ಉದ್ದೇಶಿಸಿದ್ದು, ಇದಕ್ಕಾಗಿ ಲಗತ್ತಿಸಿದ ನಮೂನೆಯಲ್ಲಿ ಸರ್ಕಾರಕ್ಕೆ ಮಾಹಿತಿಯನ್ನು ಪ್ರತಿ ತಿಂಗಳು ಸಲ್ಲಿಸಿ ಅದರ ಪ್ರತಿಯನ್ನು ನಗರ ಯೋಜನಾ ನಿರ್ದೇಶಕರ ಕಛೇರಿಗೆ ತಪ್ಪದೆ ಕಳುಹಿಸಿ ಕೊಡಲು ಈ ಮೂಲಕ ತಿಳಿಸಲಾಗಿದೆ.

(ಎನ್.ವ್ಯೆ.ಸಾಗರ), 11/8/06
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:

೧) ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರುಗಳಿಗೆ.
೨) ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ನಗರ ಯೋಜನಾ ಸದಸ್ಯರಿಗೆ.
೩) ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
೪) ನಗರ ಯೋಜನಾ ಜಂಟಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ ಮತ್ತು ವಿಭಾಗೀಯ ಕಛೇರಿ, ಮೈಸೂರು, ಗುಲ್ಬರ್ಗಾ.
೫) ವಾರದ ರಾಜ್ಯ ಪತ್ರ.

ಕರ್ನಾಟಕ ಸರ್ಕಾರ

ಸಂಖ್ಯೆ. ನಅಇ 299 ಬೆಂಯೂಪ್ರಾ 2006

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 11.8.2006.

ಸುತ್ತೋಲೆ

ವಿಷಯ:– ನಗರಾಭಿವೃದ್ಧಿ ಪ್ರಾಧಿಕಾರಗಳು ಯೋಜನೆ ರೂಪಿಸುವಿಕೆ ಹಾಗೂ ಕಾರ್ಯಾನುಷ್ಠಾನಕ್ಕೆ ತರುವುದರ ಕುರಿತು ವರದಿಯನ್ನು ಪ್ರತಿ ತಿಂಗಳು ಸರ್ಕಾರಕ್ಕೆ ಸಲ್ಲಿಸುವ ಕುರಿತು.

ಉಲ್ಲೇಖ:– ದಿನಾಂಕ: 22.5.2006 ರಂದು ನಡೆದ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾರ್ಯನಿರ್ವಹಣೆ ಪರಿಶೀಲನೆ ಸಭೆಯ ವಿಷಯ ಸಂಖ್ಯೆ. 1(1).

* * * * *

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರಡಿಯಲ್ಲಿ ರಚಿಸಲಾದ ಕೆಲವು ನಗರಾಭಿವೃದ್ಧಿ ಪ್ರಾಧಿಕಾರಗಳು ಇದುವರೆವಿಗೂ ಯಾವುದೇ ಯೋಜನೆಗಳನ್ನು ಕೈಗೊಳ್ಳದೇ ಇರುವುದನ್ನು ಮತ್ತು ಕೆಲವು ನಗರಾಭಿವೃದ್ಧಿ ಪ್ರಾಧಿಕಾರಗಳು ಅನೇಕ ವರ್ಷಗಳ ಹಿಂದೆ ಕೈಗೊಂಡ ಯೋಜನೆಗಳಲ್ಲಿ ನಿವೇಶನಗಳನ್ನು ವಿತರಿಸಲಾಗಿದ್ದರೂ ಅವಶ್ಯಕ ಮೂಲ ಸೌಕರ್ಯಗಳನ್ನು ಒದಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರತಿ ಮಾಹೆಯಾನ ವರದಿಯನ್ನು ಪಡೆದು ಪರಿಶೀಲಿಸಲು ಸರ್ಕಾರವು ಉದ್ದೇಶಿಸಿದ್ದು, ಇದಕ್ಕಾಗಿ ಲಗತ್ತಿಸಿದ ನಮೂನೆಯಲ್ಲಿ ಸರ್ಕಾರಕ್ಕೆ ಮಾಹಿತಿಯನ್ನು ಪ್ರತಿ ತಿಂಗಳು ಸಲ್ಲಿಸಿ ಅದರ ಪ್ರತಿಯನ್ನು ನಗರ ಯೋಜನಾ ನಿರ್ದೇಶಕರ ಕಛೇರಿಗೆ ತಪ್ಪದೆ ಕಳುಹಿಸಿ ಕೊಡಲು ಈ ಮೂಲಕ ತಿಳಿಸಲಾಗಿದೆ.

(ಎನ್.ವೈ.ಸಾಗರ), 11/8/06
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:
೧) ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರುಗಳಿಗೆ.
೨) ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ನಗರ ಯೋಜನಾ ಸದಸ್ಯರಿಗೆ.
೩) ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
೪) ನಗರ ಯೋಜನಾ ಜಂಟಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ ಮತ್ತು ವಿಭಾಗೀಯ ಕಛೇರಿ, ಮೈಸೂರು, ಗುಲ್ಬರ್ಗಾ.
೫) ವಾರದ ರಾಜ್ಯ ಪತ್ರ.
೬) ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

ನಮೂನೆ (ವಿಷಯ ಸಂಖ್ಯೆ. 1)

_____ ನಗರಾಭಿವೃದ್ಧಿ ಪ್ರಾಧಿಕಾರವು ಯೋಜನೆಯ ವಿವರ ಹಾಗೂ ಕಾರ್ಯಾನುಷ್ಠಾನಕ್ಕೆ ತಂದಿರುವ ಬಗ್ಗೆ ವರದಿ

ಕ್ರ. ಸಂ	ರೂಪಿಸಿರುವ ಯೋಜನೆಯ ಹೆಸರು, ಗ್ರಾಮ, ಸ.ನಂ. ಕ್ಷೇತ್ರ ಹಾಗೂ ಅಂದಾಜು ವೆಚ್ಚ	ಯೋಜನೆಯಲ್ಲಿಯ ಒಟ್ಟು ವಿವಿಧ ನಿವೇಶನಗಳ ಸಂಖ್ಯೆಯ ವಿವರಗಳು	ಯೋಜನೆಯ ಅವಶ್ಯಕ ಮೂಲ ಸೌಕರ್ಯಗಳನ್ನು ಒಳಗೊಂಡಂತೆ (ಸಿವಿಲ್ ಕಾಮಗಾರಿ ಮತ್ತು ಪೌರ ಸೌಲಭ್ಯ) ಇತ್ಯಾದಿ ಅಭಿವೃದ್ಧಿ ಪಡಿಸಲಾಗಿದೆಯೇ ವಿವರ	ಯೋಜನೆಯಲ್ಲಿನ ಎಷ್ಟು ನಿವೇಶನಗಳನ್ನು ವಿತರಿಸಲಾಗಿದೆ ವಿವಿಧ ಆಳತೆಯ ನಿವೇಶನ ವಿವರ	ಯೋಜನೆಯಲ್ಲಿನ ಎಷ್ಟು ನಿವೇಶನಗಳನ್ನು ವಿತರಿಸಲು ಬಾಕಿ ಉಳಿದಿರುವುದು	ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ನಿವೇಶನಗಳ ಸಂಖ್ಯೆ ಮತ್ತು ಕ್ಷೇತ್ರ	ಸದರಿ ನಿವೇಶನಗಳನ್ನು ಹಂಚಿಕೆ ಮಾಡಿರುವ ಬಗ್ಗೆ ವಿವರ	ನಿವೇಶನ ವಿತರಿಕೆಯಿಂದ ಇದುವರೆವಿಗೆ ಸಂಗ್ರಹಿಸಲಾದ ಮೊತ್ತ (ರೂ. ಲಕ್ಷಗಳಲ್ಲಿ)	ಬಾಕಿ ಉಳಿದಿರುವ ವಸತಿ ನಿವೇಶನ/ ಸಿಎ/ ವಾಣಿಜ್ಯ ನಿವೇಶನಗಳನ್ನು ವಿತರಣೆ ಮಾಡುವುದರಿಂದ ಬರುವ ಅಂದಾಜು ಮೊತ್ತ	ಯೋಜನೆಯಿಂದ ಒಟ್ಟು ನಿರೀಕ್ಷಿತ ಮೊತ್ತ (ರೂ. ಲಕ್ಷಗಳಲ್ಲಿ)	ಯೋಜನೆಗೆ ಇದುವರೆವಿಗೆ ಖರ್ಚು ಮಾಡಿರುವ ಒಟ್ಟು ಮೊತ್ತ	ಯೋಜನೆಯನ್ನು ಸಂಪೂರ್ಣ ಗೊಳಿಸಲು ಬೇಕಾಗುವ ಹೆಚ್ಚುವರಿ ವೆಚ್ಚ	ಯೋ ಯಿಂ ಪ್ರಾಧಿಕ ಉಂಟಾ ಲಾಭ/ (11 12+
1	2	3	4	5	6	7	8	9	10	11	12	13	14

46 (1)

ಕರ್ನಾಟಕ ಸರ್ಕಾರ

ಸಂಖ್ಯೆ. ನಆಇ 299 ಬೆಂರೂಪ್ರಾ 2006

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 11.8.2006.

ಸುತ್ತೋಲೆ

ವಿಷಯ:– ನಗರಾಭಿವೃದ್ಧಿ ಪ್ರಾಧಿಕಾರಗಳು ಯೋಜನೆ ರೂಪಿಸುವಿಕೆ ಹಾಗೂ ಕಾರ್ಯಾನುಷ್ಠಾನಕ್ಕೆ ತರುವುದರ ಕುರಿತು ವರದಿಯನ್ನು ಪ್ರತಿ ತಿಂಗಳು ಸರ್ಕಾರಕ್ಕೆ ಸಲ್ಲಿಸುವ ಕುರಿತು.

ಉಲ್ಲೇಖ:– ದಿನಾಂಕ: 22.5.2006 ರಂದು ನಡೆದ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾರ್ಯನಿರ್ವಹಣೆ ಪರಿಶೀಲನೆ ಸಭೆಯ ವಿಷಯ ಸಂಖ್ಯೆ. 1(1).

* * * * *

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರಡಿಯಲ್ಲಿ ರಚಿಸಲಾದ ಕೆಲವು ನಗರಾಭಿವೃದ್ಧಿ ಪ್ರಾಧಿಕಾರಗಳು ಇದುವರೆವಿಗೂ ಯಾವುದೇ ಯೋಜನೆಗಳನ್ನು ಕೈಗೊಳ್ಳದೇ ಇರುವುದನ್ನು ಮತ್ತು ಕೆಲವು ನಗರಾಭಿವೃದ್ಧಿ ಪ್ರಾಧಿಕಾರಗಳು ಅನೇಕ ವರ್ಷಗಳ ಹಿಂದೆ ಕೈಗೊಂಡ ಯೋಜನೆಗಳಲ್ಲಿ ನಿವೇಶನಗಳನ್ನು ವಿತರಿಸಲಾಗಿದ್ದರೂ ಅವಶ್ಯಕ ಮೂಲ ಸೌಕರ್ಯಗಳನ್ನು ಒದಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರತಿ ಮಾಹೆಯಾನ ವರದಿಯನ್ನು ಪಡೆದು ಪರಿಶೀಲಿಸಲು ಸರ್ಕಾರವು ಉದ್ದೇಶಿಸಿದ್ದು, ಇದಕ್ಕಾಗಿ ಲಗತ್ತಿಸಿದ ನಮೂನೆಯಲ್ಲಿ ಸರ್ಕಾರಕ್ಕೆ ಮಾಹಿತಿಯನ್ನು ಪ್ರತಿ ತಿಂಗಳು ಸಲ್ಲಿಸಿ ಅದರ ಪ್ರತಿಯನ್ನು ನಗರ ಯೋಜನಾ ನಿರ್ದೇಶಕರ ಕಛೇರಿಗೆ ತಪ್ಪದೆ ಕಳುಹಿಸಿ ಕೊಡಲು ಈ ಮೂಲಕ ತಿಳಿಸಲಾಗಿದೆ.

(ಎನ್.ವೈ.ಸಾಗರ), 11/8/06
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:

೧) ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರುಗಳಿಗೆ.
೨) ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ನಗರ ಯೋಜನಾ ಸದಸ್ಯರಿಗೆ.
೩) ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
೪) ನಗರ ಯೋಜನಾ ಜಂಟಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ ಮತ್ತು ವಿಭಾಗೀಯ ಕಛೇರಿ, ಮೈಸೂರು, ಗುಲ್ಬರ್ಗಾ.
೫) ವಾರದ ರಾಜ್ಯ ಪತ್ರ.
೬) ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

UDA/PA

ನಮೂನೆ (ವಿಷಯ ಸಂಖ್ಯೆ. 1)

---------- ನಗರಾಭಿವೃದ್ಧಿ ಪ್ರಾಧಿಕಾರವು ಯೋಜನೆಯ ವಿವರ ಹಾಗೂ ಕಾರ್ಯಾನುಷ್ಠಾನಕ್ಕೆ ತಂದಿರುವ ಬಗ್ಗೆ ವರದಿ

ಕ್ರ. ಸಂ	ರೂಪಿಸಿರುವ ಯೋಜನೆಯ ಹೆಸರು, ಗ್ರಾಮ, ಸ.ನಂ. ಕ್ಷೇತ್ರ ಹಾಗೂ ಅಂದಾಜು ವೆಚ್ಚ	ಯೋಜನೆಯಲ್ಲಿಯ ಒಟ್ಟು ವಿವಿಧ ನಿವೇಶನಗಳ ಸಂಖ್ಯೆಯ ವಿವರಗಳು	ಯೋಜನೆಯ ಅವಶ್ಯಕ ಮೂಲ ಸೌಕರ್ಯಗಳನ್ನು ಒಳಗೊಂಡಂತೆ (ಸಿವಿಲ್ ಕಾಮಗಾರಿ ಮತ್ತು ಪೌರ ಸೌಲಭ್ಯ) ಇತ್ಯಾದಿ ಅಭಿವೃದ್ಧಿ ಪಡಿಸಲಾಗಿದೆಯೇ ವಿವರ	ಯೋಜನೆಯಲ್ಲಿನ ಎಷ್ಟು ನಿವೇಶನಗಳನ್ನು ವಿತರಿಸಲಾಗಿದೆ ವಿವಿಧ ಅಳತೆಯ ನಿವೇಶನ ವಿವರ	ಯೋಜನೆಯಲ್ಲಿನ ಎಷ್ಟು ನಿವೇಶನಗಳನ್ನು ವಿತರಿಸಲು ಬಾಕಿ ಉಳಿದಿರುವುದು	ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ನಿವೇಶನಗಳ ಸಂಖ್ಯೆ ಮತ್ತು ಕ್ಷೇತ್ರ	ಸದರಿ ನಿವೇಶನಗಳನ್ನು ಹಂಚಿಕೆ ಮಾಡಿರುವ ಬಗ್ಗೆ ವಿವರ	ನಿವೇಶನ ವಿತರಿಕೆಯಿಂದ ಇದುವರೆವಿಗೆ ಸಂಗ್ರಹಿಸಲಾದ ಮೊತ್ತ (ರೂ. ಲಕ್ಷಗಳಲ್ಲಿ)	ಬಾಕಿ ಉಳಿದಿರುವ ವಸತಿ ನಿವೇಶನ/ ಸಿಎ/ ವಾಣಿಜ್ಯ ನಿವೇಶನಗಳನ್ನು ವಿತರಣೆ ಮಾಡುವುದರಿಂದ ಬರುವ ಅಂದಾಜು ಮೊತ್ತ	ಯೋಜನೆಯಿಂದ ಒಟ್ಟು ನಿರೀಕ್ಷಿತ ಮೊತ್ತ (ರೂ. ಲಕ್ಷಗಳಲ್ಲಿ)	ಯೋಜನೆಗೆ ಇದುವರೆವಿಗೆ ಖರ್ಚು ಮಾಡಿರುವ ಒಟ್ಟು ಮೊತ್ತ	ಯೋಜನೆಯನ್ನು ಸಂಪೂರ್ಣಗೊಳಿಸಲು ಬೇಕಾಗುವ ಹೆಚ್ಚುವರಿ ವೆಚ್ಚ	ಯೋಜನೆಯಿಂದ ಪ್ರಾಧಿಕಾರಕ್ಕೆ ಉಂಟಾಗುವ ಲಾಭ/ ನಷ್ಟ (11-12+13)
1	2	3	4	5	6	7	8	9	10	11	12	13	14

development of parks with the assistance of Horticulture Department. If the applicant intends to take up the related works by the concerned Department/Authority/Board, the Authority shall collect the entire estimated amount from the applicant and remit the same to the respective Department/ Authority/ Board or if the applicant intends to take up such development works by himself, then he can approach the concerned Department/ Authority/Board by himself and pay the supervision fees to the concerned Department/ Authority/Board and may carry out the work through private registered contractors. The applicant shall then submit to the authority a completion certificate issued by the concerned Department/ Authority/Board. If the authority decides to take up the civil works by itself it shall get the estimate prepared by the concerned PWD as per prevailing schedule of rates and shall issue a notice to the applicant to pay 4% supervision charges and 17.5% ETP charges on the estimated amount in addition to the estimated amount of civil works under section 32 of the Karnataka Urban Development Authority Act, 1987.

4. After collecting the statutory fee under the provision of KTCP Act, 1961 and development fees for various developmental works under Karnataka Urban Development Authority Act, 1987 the Authority may release the layout only after obtaining the relinquishment deed for the transfer of ownership of roads, parks and open spaces and civic amenity areas to the Authority free of cost. The Authority shall execute the development of civil works by itself and the applicant shall carry out other works such as water supply and sewerage works under the supervision of KUWSSB, electricity works under the supervision of concerned Electricity Boards/Company, development of parks and play grounds under the supervision/assistance of Horticulture Department. The Authority shall spend the development charges so collected for the development of

concerned layouts only and these works have to be completed within the stipulated period.

5. If the applicant submits the application to take up civil works by himself, he may be permitted to do so by collecting supervision charges at the rate of 4% of the estimated value and also by taking an affidavit from the applicant to the effect that the civil works will be completed as per the specifications of the Engineering Member of the Authority. The applicant shall obtain a certificate from the Engineering Member of the Authority regarding completion of civil work as specified by the Authority. The applicant shall also produce completion certificates of other works from respective Boards and Departments after completing the other developmental works. Necessary action should be taken to implement Rain Water Harvesting system in the layout.

6. Private Developers should invariably produce NOCs obtained form concerned Authority, KUWS&DB and Electricity Board.

7. Private Developers should strictly follow solid waste management guidelines.

8. After the applicant hands over roads, parks, open spaces and civic amenity sites to the Authority under Section 32 of Karnataka Urban Development Authority Act, 1987, the Authority shall initiate action to release the layout plan by following all the procedures as directed in the Government Circular No. Na.A.E. 112 Bem.Roo.Pra 2005 dated 26-05-05 and release the sites as specified.

9. The concerned technical officers of the Urban Development Authority and the Local Authority shall jointly inspect the quality of developmental works of the layout from time to time. Joint inspection should be made atleast 4 to 5 times and stages of development and inspection report should be documented during joint inspection. After the completion of the development works, the Authority

shall hand over the layout i.e, roads, parks & open spaces to the concerned Local Authority. If any problem arises between the Authority and the Local Authority while such handing over, the Authority shall send a proposal for joint inspection by the Director of Town Planning and Director of Municipal Administration and after such verification, action shall be taken as directed by the Government. At this stage also instruction given in the circular dated: 26-5-2005 shall be followed.

10. Before taking up the construction work, the site owners of the layout should obtain building permission from the concerned Local Authority and Local Authority should insist to take up suitable measures for the Rain Water Harvesting in the layout.

11. As regards to Civic Amenity site allotment, priority should be given to installation of sub stations by Electricity Board, overhead water tank or treatment plant by Water Supply Board, Government Educational Institutions, post office, Police Station, Bus stand etc. Also open space marked in the layout, may also be utilised for first stage of garbage disposal. Civic Amenity sites could be allotted to other agencies / organisations only after obtaining NOCs from above said agencies to the effect that Civic Amenity site is not required for their purpose.

All the Urban Development Authorities are hereby directed to follow the above guidelines strictly, failing which disciplinary action will be initiated against the concerned Commissioners of the Authority.

(C.T.Narayanaswamy)
Under Secretary,
Urban Development Department

1. All deputy Commissioners.
2. Director, Town Planning Department.
3. All Commissioners, Urban Development Authority.
4. Member Secretary, Town Planning Authority.
5. All Commissioners of Corporation/CMC and TMC.
6. All Chief Officers, CMC/TMC.
7. Guard File/Spare Copies

C5:ck:circular

GOVERNMENT OF KARNATAKA

No.UDD/174/Bemapra:2006

Karnataka Government Secretariat,
Vikasa Soudha,
Bangalore, dated:12-11-2007

Sub: Procedure to be followed by Urban Development Authorities while approving and developing private layouts.

Ref: 1) Government Circular No.HUD 223 TTP 89 (11) dated 13-02-90
2) Government Circular No.HUD 107 TTP 90 dated 21-04-90
3) Government Circular No.NA.A.E 104(1)/2 Bem.Ru.Pra dated 9-05-05
4) Government Order No.1025 Bem.Bhoo.Swa. 2003 dated 9-06-05

All Urban Development Authorities constituted under the Karnataka Urban Development Authorities Act, 1987 shall also work as Planning Authorities under the provision of Karnataka Town & Country Planning Act, 1961. These Urban Development Authorities have to take action to approve and develop layouts under the provisions of Karnataka Town & Country Planning Act, 1961 and Karnataka Urban Development Authorities Act, 1987.

Even though the Act is very clear about the procedure to be followed for approval and development of layouts within the jurisdiction of Urban Development Authorities and clearly specified guidelines, rules, regulations, circulars and directions issued by the Government time to time, the Urban Development Authorities are not following the same, while preparing and approving layouts. It has come to the notice of the Government that the private layouts approved by the Urban Development Authorities and developed by private firms are not upto the mark which results in incurring higher expenditure causing inconvenience to the public to bear the additional cost for the sites developed in such layouts. Hence, to

C5:ck:circular

578
28/11/07

have uniform procedure, all the Urban Development Authorities in the State shall follow the following guidelines while approving and developing private layouts.

1. The Authority shall receive application with a draft layout plan prepared after conducting survey of the proposed land and considering existing physical conditions of the land, contours, natural and man made topographical features, existing public road, storm water drains etc., along with necessary documents from the applicant.

2. After receiving the application, the documents submitted by the applicant are verified and the draft layout is prepared with conformed land use of the Master Plan (ODP/CDP) approved as per KTCP Act and its zoning regulations and sub-division regulations, By conducting site inspection considering/taking into account the ground conditions and with a view to preserve natural valleys, drains, rivers etc., and then the draft layout is modified if necessary considering the following points.

   i) On either side of the roads in the layouts, minimum 1.0m wide area is to be reserved for laying underground drainage pipes, water supply pipes and drawing electric lines.

   ii) Suitable land, for sewerage treatment plant, garbage storage should be earmarked in the layout when the extent of the proposed layout exceeds 10 hect.

3. Once the authority resolves to approve the plan, a notice to the applicant shall be served to pay the required fees under section 18 of KTCP Act and rule 37(A) of Karnataka Planning Authority Rules 1965. Action has to be taken by Technical (Engineering) Section of the Authority to prepare estimates for civil works with the assistance of concerned PWD (as per current S.R), estimate for the electrical work from the concerned Electricity Board and estimate for

ಕರ್ನಾಟಕ ಸರ್ಕಾರ

ಸಂ. ನಅಇ:174:ಬಿಎಸ್ವೈ:2007

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ.
ಬೆಂಗಳೂರು ದಿನಾಂಕ: 12-11-2007

ಸುತ್ತೋಲೆ

ವಿಷಯ: ನಗರಾಭಿವೃದ್ಧಿ ಪ್ರಾಧಿಕಾರಗಳು ಕಾಸಗಿ ವಿನ್ಯಾಸ ಅನುಮೋದನೆ ಮತ್ತು ಅಭಿವೃದ್ಧಿಪಡಿಸುವ ಸಂಬಂಧ ಅನುಸರಿಸಬೇಕಾದ ಕ್ರಮದ ಬಗ್ಗೆ.

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂ. ಪೌಆಯುಇ:223:ಟಿಟಿಪಿ:89(11) ದಿನಾಂಕ 13-02-90.
2. ಸರ್ಕಾರದ ಸುತ್ತೋಲೆ ಸಂ. ಪೌಆಯುಇ:107:ಟಿಟಿಪಿ:90 ದಿನಾಂಕ: 21-04-90.
3. ಸರ್ಕಾರದ ಸುತ್ತೋಲೆ ಸಂ. ನಅಇ:104(1):2:ಬೆಂರೂಪ್ರಾ:2005 ದಿನಾಂಕ: 09-05-05.
4. ಸರ್ಕಾರದ ಆದೇಶ ಸಂ. ನಅಇ:1025:ಬೆಂಭೂಸ್ವಾ:2003 ದಿನಾಂಕ: 09-06-05.

*****

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಯನ್ವಯ ರಚಿಸಲ್ಪಟ್ಟಿರುವ ನಗರಾಭಿವೃದ್ಧಿ ಪ್ರಾಧಿಕಾರಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ವಯ ಯೋಜನಾ ಪ್ರಾಧಿಕಾರವಾಗಿಯೂ ಸಹ ಕಾರ್ಯನಿರ್ವಹಿಸಬೇಕಾಗುತ್ತದೆ. ನಗರಾಭಿವೃದ್ಧಿ ಪ್ರಾಧಿಕಾರಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಯನ್ವಯ ವಿನ್ಯಾಸವನ್ನು ಅನುಮೋದಿಸಿ ಅಭಿವೃದ್ಧಿಪಡಿಸಲು ಕ್ರಮ ಜರುಗಿಸಬೇಕಾಗುತ್ತದೆ. ನಗರಾಭಿವೃದ್ಧಿ ಪ್ರಾಧಿಕಾರಗಳು ಕೆಲವು ವ್ಯಾಪ್ತಿಯಲ್ಲಿ ವಿನ್ಯಾಸ ಅನುಮೋದನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕ್ರಮದ ಬಗ್ಗೆ ಕಾಲಕಾಲಕ್ಕೆ ಸರ್ಕಾರವು ಹಲವು ಬಾರಿ ಸರ್ಕಾರದ ಹಲವಾರು ಸುತ್ತೋಲೆ ನಿರ್ದೇಶನಗಳನ್ನು ಹೊರಡಿಸಿದ್ದರೂ ಸಹ ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ಸರ್ಕಾರದ ಸೂಚನೆಗಳನ್ವಯ ಕ್ರಮ ಜರುಗಿಸದೇ ಇರುವುದರಿಂದ ವಿನ್ಯಾಸದ ಅಭಿವೃದ್ಧಿ ಕಾರ್ಯಗಳ ಗುಣಮಟ್ಟದಲ್ಲಿ ಉದ್ದೇಶಿತ ಸಾಧನೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದರಿಂದಾಗಿ ವಿನ್ಯಾಸದ ಅಭಿವೃದ್ಧಿಗಾಗಿ ಹೆಚ್ಚುವರಿ ಭೂಮಿ ಪಡೆಯಬೇಕಾಗುವುದರ ಜೊತೆಗೆ ಸಾರ್ವಜನಿಕರಿಗೆ ಅನಾನುಕೂಲ ಉಂಟಾಗುವುದರಿಂದ ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು ವಿನ್ಯಾಸ ಅನುಮೋದನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಏಕ ರೂಪವಾದ ಕ್ರಮವನ್ನು ಜರುಗಿಸಲು ಅನುವಾಗುವಂತೆ ಸರ್ಕಾರವು ಈ ಕೆಳಕಂಡಂತೆ ಮಾರ್ಗಸೂಚಿಯನ್ನು ನಿಗದಿಪಡಿಸಿದೆ.

1. ಅರ್ಜಿದಾರರಿಂದ ಪ್ರಸ್ತಾಪಿತ ಜಮೀನಿನ ಸರ್ವೇಯರ್ ನಕ್ಷೆ ಜಮೀನಿನ ಭೂಮಿಯ ವಸ್ತುಸ್ಥಿತಿ, ಹಾಲಿ ಸಾರ್ವಜನಿಕ ರಸ್ತೆ ಪ್ರಾಕೃತಿಕ (natural) ಭೂ ಲಕ್ಷಣಗಳು, ಮಾನವ ನಿರ್ಮಿತ ಲಕ್ಷಣಗಳು, ಹಾಲಿ ಸಾರ್ವಜನಿಕ ರಸ್ತೆ ಮಿಲಗಳು, ಮರಕಿ ವೀರು ಚರಂಡಿಗಳು ಇತ್ಯಾದಿಗಳನ್ನು ಪರಿಗಣಿಸಿ ಕರಡು ವಿನ್ಯಾಸ ರಚಿಸಿ ಅಗತ್ಯ ಮಾಹಿತಿಗಳೊಂದಿಗೆ ಅರ್ಜಿ ಪಡೆಯತಕ್ಕದ್ದು.

2. ಕಾಸಗಿ ವಿನ್ಯಾಸ ಅನುಮೋದನೆಗೆ ಅರ್ಜಿ ಸ್ವೀಕರಿಸಿದ ನಗರ ಯೋಜಕರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ ನಗರಾಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ವಯ ಅನುಮೋದನೆಯಾಗಿರುವ ಮಾಸ್ಟರ್ ಪ್ಲಾನ್ (ಸ್ಥಳಾಭಿವೃದ್ಧಿ ಯೋಜನೆ : ಪ್ಲೇಸ್ ಮೇಕಿಂಗ್) ಯೋಜನೆ)

ವಿಸ್ತರಣಾಧಿಕಾರಿ/ ಎ.ಸಿ.ಪಿ/ಟಿ.ಪಿ/ಸಿಪಿಸಿ

28/11

DD(HQ)

28.11.07

ಶ್ರೀ ರಾಜುಲಿಂಗಯ್ಯ/ ನಯಕೋಪ

ಕ.ನ.ಪ್ರಾ.
ಬೆಂಗಳೂರು
579
28/11/07

ಪ್ರಸ್ತಾವನೆ ಮತ್ತು ವಲಯ ನಿಯಮಾವಳಿ ಹಾಗೂ ಭೂ ಉಪ ವಿಭಾಗಕ್ಕೆ ಸಂಬಂಧಿಸಿದಂತೆ ಅನುಮೋದಿಸಿರುವ ನಿಯಮಾವಳಿಗಳನ್ನು ಮತ್ತು ಮಾಸ್ಟರ್ ಪ್ಲಾನ್ (ಸ್ಥೂಲಾಭಿವೃದ್ಧಿ : ವ್ಯಾಪಕಾಭಿವೃದ್ಧಿ ಯೋಜನೆ) ವರದಿಯಲ್ಲಿ ನಮೂದಿಸಿರುವ ಯೋಜನಾ ಪರಿಮಾಣಗಳನ್ನು ಗಮನದಲ್ಲಿಟ್ಟುಕೊಂಡು ಸ್ಥಳ ಪರಿಶೀಲಿಸಿ ಕರಡು ವಿನ್ಯಾಸವನ್ನು ಪರಿಶೀಲಿಸುವುದು ಹಾಗೂ ಅಗತ್ಯವಿದ್ದಲ್ಲಿ ವಿನ್ಯಾಸವನ್ನು ಸೂಕ್ತವಾಗಿ ಸ್ಥಳ ಪರಿಸ್ಥಿತಿಯನ್ನು ಪರಿಗಣನೆಗೆ ತೆಗೆದುಕೊಂಡು ಮಾರ್ಪಡಿಸಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸತಕ್ಕದ್ದು. ಕೆರೆ, ನಾಲಾ. ಡ್ರೇನ್ಸ್, ನದಿ ಮತ್ತು ಕೊಳ್ಳಗಳನ್ನು ಹಾಪಾಡಿಕೊಂಡು ಹೋಗುವ ದೃಷ್ಟಿಯಿಂದ ಹಾಗೂ ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿನ್ಯಾಸವನ್ನು ಮಾರ್ಪಡಿಸತಕ್ಕದ್ದು.

i) ವಿನ್ಯಾಸದಲ್ಲಿ ರಸ್ತೆಗಳ ಎರಡೂ ಕಡೆ ಒಳ ಚರಂಡಿ ಮತ್ತು ನೀರು ಸರಬರಾಜು ಪೈಪುಗಳನ್ನು ಹಳವಡಿಸಲು ಹಾಗೂ ವಿದ್ಯುತ್ ಲೈನ್‌ಅನ್ನು ನಿರ್ಮಿಸಲು ಕನಿಷ್ಠ 1.0 ಮೀ. ಅಗಲದಷ್ಟು ಜಾಗವನ್ನು ಕಾಯ್ದಿರಿಸತಕ್ಕದ್ದು.

ii) ವಿನ್ಯಾಸದ ವಿಸ್ತೀರ್ಣವು 10 ಹೆ. ಗಿಂತ ಹೆಚ್ಚಿದ್ದಲ್ಲಿ ಚರಂಡಿ ನೀರು ಸಂಸ್ಕರಣಾ ಘಟಕ. ಘನತ್ಯಾಜ್ಯ ವಸ್ತು ಸಂಗ್ರಹಣೆಗಾಗಿ ಸೂಕ್ತ ಜಾಗಗಳನ್ನು ಮೀಸಲಿರಿಸತಕ್ಕದ್ದು.

3. ಪ್ರಾಧಿಕಾರವು ಕರಡು ವಿನ್ಯಾಸಕ್ಕೆ ಅನುಮೋದನೆ ನೀಡಿದ ನಂತರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಪ್ರಕರಣ 18 ರನ್ವಯ ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965 ರ ನಿಯಮ 37(ಎ) ರಂತೆ ನಿಗದಿಪಡಿಸಿರುವ ಶುಲ್ಕ ಪಾವತಿಸಲು ಅರ್ಜಿದಾರರಿಗೆ ನಿಗದಿತ ನಮೂನೆಯಲ್ಲಿ ಸೂಚನೆಗಳನ್ನು ನೀಡತಕ್ಕದ್ದು ಹಾಗೂ ಪ್ರಾಧಿಕಾರದ ತಾಂತ್ರಿಕ (ಇಂಜಿನಿಯರಿಂಗ್) ಶಾಖೆಯಲ್ಲಿ ವಿನ್ಯಾಸದ ಸಿವಿಲ್ ಕಾಮಗಾರಿ. ಒಳಚರಂಡಿ ಮತ್ತು ನೀರು ಸರಬರಾಜು ವ್ಯವಸ್ಥೆ ವಿದ್ಯುತ್ ಸೌಲಭ್ಯ ಮತ್ತು ಉದ್ಯಾನವನವ ಅಭಿವೃದ್ಧಿಗಾಗಿ ಅಂದಾಜು ಪಟ್ಟಿಯನ್ನು ರೂಪಿಸಲು ಕ್ರಮ ಜರುಗಿಸತಕ್ಕದ್ದು. ಸಿವಿಲ್ ಕಾಮಗಾರಿಗೆ ಅಂದಾಜು ಪಟ್ಟಿ ಸಂಬಂಧಿಸಿದ ಲೋಕೋಪಯೋಗಿ ಇಲಾಖೆ (ಪ್ರಸಕ್ತ ಸಾಲಿನ ಎಸ್.ಆರ್. ಆಧಾರದಲ್ಲಿ) ಸಹಾಯದಿಂದಲೂ. ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗೆ ಸಂಬಂಧಿಸಿದ ಅಂದಾಜು ಪಟ್ಟಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಾಯದಿಂದಲೂ ಮತ್ತು ವಿದ್ಯುತ್ ಸೌಲಭ್ಯಕ್ಕೆ ಸಂಬಂಧಿಸಿದಂತೆ ಅಂದಾಜು ಪಟ್ಟಿಯನ್ನು ಸಂಬಂಧಿಸಿದ ವಿದ್ಯುತ್ ಸರಬರಾಜು ಸಂಸ್ಥೆಯಿಂದಲೂ ಮತ್ತು ಉದ್ಯಾನವನ ಅಭಿವೃದ್ಧಿಪಡಿಸಲು ಅಂದಾಜು ವೆಚ್ಚವನ್ನು ತೋಟಗಾರಿಕೆ ಇಲಾಖೆಯ ಸಹಾಯದಿಂದಲೂ ರೂಪಿಸಿಕೊಳ್ಳತಕ್ಕದ್ದು. ಸದರಿ ಕಾರ್ಯಗಳನ್ನು ಸಂಬಂಧಿಸಿದ ಇಲಾಖೆಯಿಂದಲೇ ಕೆಲಸ ಮಾಡಿಸಲು ಇಚ್ಛಿಸಿದಲ್ಲಿ ಅಂದಾಜಿನ ಹಣವನ್ನು ಪ್ರಾಧಿಕಾರವು ಅರ್ಜಿದಾರರಿಂದ ಪಾವತಿಸಿಕೊಂಡು ಅದನ್ನು ಆಯಾ ಇಲಾಖೆಯಲ್ಲಿ ಡೆಪಾಸಿಟ್ ಮಾಡಬೇಕು ಅಥವಾ ಅರ್ಜಿದಾರರೇ ಸದರಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲು ಇಚ್ಛಿಸಿದಲ್ಲಿ ಅರ್ಜಿದಾರರು ಆಯಾ ಇಲಾಖೆಯನ್ನು ಸಂಪರ್ಕಿಸಿ ಇಲಾಖೆಯ ಸೂಚನೆಯಂತೆ ಮೇಲ್ವಿಚಾರಣಾ ಶುಲ್ಕ ಆಯಾ ಇಲಾಖೆಗೆ ಪಾವತಿಸಿ ಖಾಸಗಿ ನೋಂದಾಯಿತ (ರಿಜಿಸ್ಟರ್ಡ್)ಗುತ್ತಿಗೆದಾರರಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ಸಂಬಂಧಿಸಿದ ಇಲಾಖೆಯಿಂದ ಮುಕ್ತಾಯ ಪ್ರಮಾಣ ಪತ್ರ ಪಡೆದು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು. ಸಿವಿಲ್ ಕಾಮಗಾರಿಯನ್ನು ಪ್ರಾಧಿಕಾರವೇ ಕೈಗೊಳ್ಳುವ ಸಂದರ್ಭದಲ್ಲಿ ಸಂಬಂಧಿಸಿದ ಲೋಕೋಪಯೋಗಿ ಇಲಾಖೆಯಿಂದ (ಪ್ರಸಕ್ತ ಸಾಲಿನ ಎಸ್.ಆರ್. ಆಧಾರದಲ್ಲಿ) ತಯಾರಿಸಿದ ಅಂದಾಜು ಮೊತ್ತಕ್ಕೆ ಶೇ. 4 ರಷ್ಟು ಉಸ್ತುವಾರಿ ಶುಲ್ಕ ಮತ್ತು ಶೇ. 17.50 ರಷ್ಟು ಇ.ಟಿ.ಪಿ. ಶುಲ್ಕ ಸೇರಿಸಿ ಅಭಿವೃದ್ಧಿ ಶುಲ್ಕ ನಿಗದಿಪಡಿಸಿ ಅದರಂತೆ ಅಭಿವೃದ್ಧಿ ಶುಲ್ಕ ಪಾವತಿಸಲು ಅರ್ಜಿದಾರರಿಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 32 ರನ್ವಯ ಸೂಚನೆ ನೀಡತಕ್ಕದ್ದು.

4. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ವಯ ನಿಗಧಿಪಡಿಸಿರುವ ಶುಲ್ಕ ಮತ್ತು ವಿವಿಧ ಕಾಮಗಾರಿಗಳಿಗಾಗಿ ಅಭಿವೃದ್ಧಿ ಶುಲ್ಕವನ್ನು ಅರ್ಜಿದಾರರು ಪಾವತಿಸಿದ ನಂತರ ವಿನ್ಯಾಸದಲ್ಲಿ ರಸ್ತೆ ಉದ್ಯಾನವನ ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಜಾಗವನ್ನು ಪ್ರಾಧಿಕಾರಕ್ಕೆ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಅರ್ಜಿದಾರರು ಪರಿಸ್ಕರಣಾ ಪತ್ರದ (ರಿಲಿಂಕ್ವಿಶ್‌ಮೆಂಟ್ ಡೀಡ್) ಮೂಲಕ

ಹಸ್ತಾಂತರಿಸಿದ ಬಳಿಕ ವಿನ್ಯಾಸವನ್ನು ಬಿಡುಗಡೆಗೊಳಿಸತಕ್ಕದ್ದು ಹಾಗೂ ಸಿವಿಲ್ ಕಾಮಗಾರಿಯನ್ನು ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯ ಮೇಲ್ವಿಚಾರಣೆಯಲ್ಲಿ ಮತ್ತು ವಿದ್ಯುತ್ ಸರಬರಾಜು ಕಾಮಗಾರಿಯನ್ನು ಸಂಬಂಧಿಸಿದ ವಿದ್ಯುತ್ ಸರಬರಾಜು ಸಂಸ್ಥೆ ಮೇಲ್ವಿಚಾರಣೆಯಲ್ಲಿ ಮತ್ತು ಉದ್ಯಾನವನದ ಅಭಿವೃದ್ಧಿ ಕಾಮಗಾರಿಯನ್ನು ಪ್ರಾಧಿಕಾರದ (ತೋಟಗಾರಿಕೆ ಇಲಾಖೆಯ) ಮೇಲ್ವಿಚಾರಣೆಯಲ್ಲಿ (ಮತ್ತು ಸಮನ್ವಯದೊಂದಿಗೆ) ಅರ್ಜಿದಾರರು (ಪ್ರಾಧಿಕಾರವು) ಕಾರ್ಯಗತಗೊಳಿಸತಕ್ಕದ್ದು. ವಿನ್ಯಾಸದ ಅಭಿವೃದ್ಧಿಗೆ ಸಂಬಂಧಿಸಿದಂತೆ ವಸೂಲು ಮಾಡುವ ಅಭಿವೃದ್ಧಿ ಶುಲ್ಕವನ್ನು ಆಯಾ ವಿನ್ಯಾಸದ ಅಭಿವೃದ್ಧಿಗಾಗಿ ಮಾತ್ರ ಪ್ರಾಧಿಕಾರವು ವೆಚ್ಚ ಮಾಡತಕ್ಕದ್ದು ಹಾಗೂ ಈ ಕಾಮಗಾರಿಗಳನ್ನು ನಿರ್ದಿಷ್ಟ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು.

5. ಒಂದು ಮೇಳಿ ಅರ್ಜಿದಾರರು ಸಿವಿಲ್ ಕಾಮಗಾರಿಯನ್ನು ಸ್ವತಃ ಕೈಗೊಳ್ಳುವ ಬಗ್ಗೆ ಅರ್ಜಿ ಸಲ್ಲಿಸಿದಲ್ಲಿ ಸಿವಿಲ್ ಕಾಮಗಾರಿಯ ಅಂದಾಜು ವೆಚ್ಚದ ಶೇ. 4 ರಷ್ಟು ಶುಲ್ಕವನ್ನು ಮೇಲ್ವಿಚಾರಣಾ ಶುಲ್ಕವನ್ನಾಗಿ ಪಾವತಿಸಿಕೊಂಡು ಸಿವಿಲ್ ಕಾಮಗಾರಿಯನ್ನು ಪ್ರಾಧಿಕಾರದ ಇಂಜಿನಿಯರ್ ಸದಸ್ಯರು ನಿಗದಿಪಡಿಸುವ ನಿರ್ದಿಷ್ಟ ತಾಂತ್ರಿಕ ಅಂಶಗಳನ್ವಯ (ಸ್ಪೆಸಿಫಿಕೇಷನ್) ಪೂರ್ಣಗೊಳಿಸುವ ಬಗ್ಗೆ ಅರ್ಜಿದಾರರಿಂದ ಒಪ್ಪಿಗೆ ಪತ್ರ ಪಡೆದುಕೊಂಡು ಅನುಮತಿ ನೀಡತಕ್ಕದ್ದು ಹಾಗೂ ಕಾಮಗಾರಿಯನ್ನು ಪ್ರಾಧಿಕಾರವು ನಿಗದಿಪಡಿಸಿದ ರೀತಿಯಲ್ಲಿ ನಿರ್ವಹಿಸಿದ ಬಗ್ಗೆ ಪ್ರಾಧಿಕಾರದ ಇಂಜಿನಿಯರ್ ಸದಸ್ಯರಿಂದ ಪ್ರಮಾಣ ಪತ್ರ ಪಡೆಯತಕ್ಕದ್ದು. ಅರ್ಜಿದಾರರು ಸಿವಿಲ್ ಕಾಮಗಾರಿಯನ್ನು ಪೂರ್ಣಗೊಳಿಸಿ ಹಾಗೂ ಉಳಿದ ಕಾಮಗಾರಿಗಳಿಗೆ ಸಂಬಂಧಿಸಿದ ಇಲಾಖೆಗಳನ್ನು ಸಂಪರ್ಕಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಸಂಬಂಧಿಸಿದ ಇಲಾಖೆಗಳಿಂದ ಮುಕ್ತಾಯ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು ವಿನ್ಯಾಸದಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಅನುಸರಿಸಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

6. ಖಾಸಗಿ ವಿನ್ಯಾಸದಾರರು / ಅಭಿವೃದ್ಧಿದಾರರು (ಡೆವಲಪರ್ಸ್) ಸಂಬಂಧಿಸಿದ ಪ್ರಾಧಿಕಾರಗಳಾದ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯಿಂದ ಮತ್ತು ವಿದ್ಯುತ್ ಸರಬರಾಜು ಸಂಸ್ಥೆಯಿಂದ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸತಕ್ಕದ್ದು.

7. ಖಾಸಗಿ ವಿನ್ಯಾಸದಾರರು / ಅಭಿವೃದ್ಧಿದಾರರು (ಡೆವಲಪರ್ಸ್) ಘನತ್ಯಾಜ್ಯ ವಸ್ತು ನಿರ್ವಹಣಾ ಮಾರ್ಗದರ್ಶನವನ್ನು ಕಡ್ಡಾಯವಾಗಿ ಅನುಸರಿಸತಕ್ಕದ್ದು.

8. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಪ್ರಕರಣ 32 ರಂತೆ ವಿನ್ಯಾಸದ ರಸ್ತೆ, ಉದ್ಯಾನವನ ಮತ್ತು ಬಯಲು ಜಾಗ ಹಾಗೂ ನಾಗರೀಕ ಸೌಲಭ್ಯದ ನಿವೇಶನಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿದ ನಂತರ ಪ್ರಾಧಿಕಾರವು ಸರ್ಕಾರದ ಸುತ್ತೋಲೆ ಸಂ. ನ�ಉಇ:112:ಬೆಂರೂಪ್ರಾ:2005 ದಿನಾಂಕ: 26-05-2005 ರಲ್ಲಿ ನೀಡಿರುವ ನಿರ್ದೇಶನದಂತೆ ವಿನ್ಯಾಸದಲ್ಲಿಯ ನಿವೇಶನಗಳನ್ನು ಬಿಡುಗಡೆಗೊಳಿಸುವ ಕುರಿತು ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿ ವಿನ್ಯಾಸವನ್ನು ಬಿಡುಗಡೆ ಮಾಡತಕ್ಕದ್ದು.

9. ವಿನ್ಯಾಸವನ್ನು ಅಭಿವೃದ್ಧಿ ಹಂತದಲ್ಲಿರುವಾಗ ನಗರಾಭಿವೃದ್ಧಿ ಪ್ರಾಧಿಕಾರದ ಮತ್ತು ಸ್ಥಳೀಯ ಸಂಸ್ಥೆಯ ತಾಂತ್ರಿಕ ಸಿಬ್ಬಂದಿಗಳು ಕೆಲಸದ ಗುಣಮಟ್ಟವನ್ನು ಕಾಯ್ದುಕೊಳ್ಳಲು ವೇಳೆಯಿಂದ ವೇಳೆಗೆ ಜಂಟಿಯಾಗಿ ಪರಿಶೀಲಿಸುವ ಅಗತ್ಯತೆ ಇದೆ. ಆದ್ದರಿಂದ ಕನಿಷ್ಠ 4 ರಿಂದ 5 ಬಾರಿ ಜಂಟಿ ಪರಿಶೀಲನೆ ನಡೆಸುವುದು ಹಾಗೂ ಜಂಟಿ ಪರಿಶೀಲನೆಯ ಸಮಯದಲ್ಲಿ ಅಭಿವೃದ್ಧಿಯ ಹಂತಗಳನ್ನು ದಾಖಲು / ದಾಸ್ತಾವೇಜು (ಡಾಕ್ಯುಮೆಂಟೇಷನ್) ಮಾಡತಕ್ಕದ್ದು. ವಿನ್ಯಾಸದ ಅಭಿವೃದ್ಧಿ ಕಾರ್ಯ ಪೂರ್ಣಗೊಂಡ ಬಳಿಕ ಪ್ರಾಧಿಕಾರವು ವಿನ್ಯಾಸವನ್ನು ಅಂದರೆ ರಸ್ತೆ ಮತ್ತು ಉದ್ಯಾನವನ : ಬಯಲು ಜಾಗವನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸತಕ್ಕದ್ದು. ಹಸ್ತಾಂತರಿಸುವ ಸಮಯದಲ್ಲಿ ಪ್ರಾಧಿಕಾರ ಮತ್ತು ಸ್ಥಳೀಯ ಸಂಸ್ಥೆಗೆ ಯಾವುದೇ ವಿವಾದ ಉಂಟಾದಲ್ಲಿ ನಗರ ಯೋಜನಾ ನಿರ್ದೇಶಕರು ಮತ್ತು ಪೌರಾಡಳಿತ ನಿರ್ದೇಶಕರ ಜಂಟಿ ಪರಿಶೀಲನೆಗೆ ಪ್ರಾಧಿಕಾರವು ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು ಹಾಗೂ ಪರಿಶೀಲನೆಯ ನಂತರ ಸರ್ಕಾರವು ನೀಡುವ ನಿರ್ದೇಶನದನ್ವಯ

ಕ್ರಮ ಜರುಗಿಸತಕ್ಕದ್ದು. ಈ ಹಂತದಲ್ಲಿಯೂ ಸರ್ಕಾರದ ದಿನಾಂಕ: 26-05-05ರ ಸುತ್ತೋಲೆಯನ್ವಯ ಕ್ರಮ ಜರುಗಿಸತಕ್ಕದ್ದು.

10. ವಿನ್ಯಾಸದಲ್ಲಿನ ನಿವೇಶನಗಳಲ್ಲಿ ಕಟ್ಟಿಡ ಕಟ್ಟುವ ಮೊದಲು ನಿವೇಶನದಾರರು ಸಂಬಂಧಿಸಿದ ಸ್ಥಳೀಯ ಸಂಸ್ಥೆಯಿಂದ ಕಟ್ಟಡ ಪರವಾನಿಗೆ ಪಡೆಯತಕ್ಕದ್ದು ಹಾಗೂ ನಿವೇಶನದಲ್ಲಿ ಮಳೆ ನೀರು ಸಂಗ್ರಹಣೆಗೆ ಅಗತ್ಯ ಕ್ರಮ ಜರುಗಿಸಲು ಕಡ್ಡಾಯ ಮಾಡತಕ್ಕದ್ದು.

11. ನಾಗರೀಕ ಸೌಲಭ್ಯದ ನಿವೇಶನಗಳ ವಿತರಣೆಗೆ ಪ್ರಥಮ ಆದ್ಯತೆಯನ್ನು ವಿದ್ಯುತ್ ಸರಬರಾಜು ಸಂಸ್ಥೆ ನಿರ್ಮಿಸುವ ಸಬ್‌ಸ್ಟೇಷನ್‌ಗೆ, ಜಲ ಮಂಡಳಿ ನಿರ್ಮಿಸುವ ನೀರಿನ ತೊಟ್ಟಿ ಅಥವಾ ನೀರು ಸಂಸ್ಕರಣಾ ಘಟಕಕ್ಕೆ ಸರ್ಕಾರಿ ಶಿಕ್ಷಣ ಸಂಸ್ಥೆಗಳು, ಅಂಚೆ ಕಛೇರಿ, ಆರಕ್ಷಕ ಠಾಣೆ, ಬಸ್ಸು ನಿಲ್ದಾಣ ಇತ್ಯಾದಿಗಳಿಗೆ ನೀಡತಕ್ಕದ್ದು. ಈ ಉದ್ದೇಶಗಳಿಗೆ ಒಂದು ವೇಳೆ ಅಗತ್ಯವಿಲ್ಲದೇ ಇದ್ದಲ್ಲಿ ಸದರಿ ಸಂಸ್ಥೆಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ನಾಗರೀಕ ಸೌಲಭ್ಯ ನಿವೇಶನಗಳನ್ನು ಇತರೆ ಸಂಸ್ಥೆಗಳಿಗೆ ನಿಯಮಾನುಸಾರ ಹಂಚತಕ್ಕದ್ದು. ಅಗತ್ಯವಿದ್ದಲ್ಲಿ ಬಯಲು ಜಾಗಕ್ಕಾಗಿ ಕಾಯ್ದಿರಿಸಿದ ಜಾಗವನ್ನು ಪ್ರಥಮ ಹಂತದ ಘನತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಉಪಯೋಗಿಸಲು ಬಳಸಬಹುದು.

ಮೇಲ್ಕಂಡ ಸೂಚನೆಗಳನ್ನು ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ. ಈ ಸೂಚನೆಗೆ ವ್ಯತಿರಿಕ್ತವಾಗಿ ಕ್ರಮ ಜರುಗಿಸಿದಲ್ಲಿ ಸಂಬಂಧಿಸಿದ ಪ್ರಾಧಿಕಾರದ ಆಯುಕ್ತರನ್ನು ಹೊಣೆಗಾರರನ್ನಾಗಿ ಮಾಡಿ ಶಿಸ್ತಿನ ಕ್ರಮ ಜರುಗಿಸಲಾಗುವುದು.

(ಎ.ಟಿ. ನಾರಾಯಣಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಗೆ:

1. ಎಲ್ಲಾ ಜಿಲ್ಲಾಧಿಕಾರಿಗಳು.
2. ನಿರ್ದೇಶಕರು, ನಗರ ಯೋಜನಾ ಇಲಾಖೆ.
3. ಆಯುಕ್ತರು, ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
4. ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರಗಳು.
5. ಆಯುಕ್ತರು, ಎಲ್ಲಾ ಮಹಾನಗರ ಪಾಲಿಕೆ, ಪುರಸಭೆ : ನಗರಸಭೆ.
6. ಮುಖ್ಯಾಧಿಕಾರಿಗಳು, ನಗರ : ಪಟ್ಟಣ ಪಂಚಾಯಿತಿ.
7. ಶಾರಕ : ಹೆಪ್ರ.

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 15ನೇ ನವೆಂಬರ್ 2001

ಸಂಖ್ಯೆ: ನಅಇ 267 ಎಂಐಬಿ 98

ಅಧಿಸೂಚನೆ

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಿಗಳ ಅಧಿನಿಯಮ, 1987ರ (1987ರ ಕರ್ನಾಟಕ ಅಧಿನಿಯಮ 34) 71ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು, 1991ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಅಂದರೆ:-

1. ಹೆಸರು ಮತ್ತು ಪ್ರಾರಂಭ: (1) ಈ ನಿಯಮಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ)(ತಿದ್ದುಪಡಿ) ನಿಯಮಗಳು, 2001 ಎಂದು ಕರೆಯತಕ್ಕದ್ದು.

(2) ಇವು ಈ ಕೂಡಲೆ ಜಾರಿಯಲ್ಲಿ ಬರತಕ್ಕದ್ದು.

2. 5ನೇ ನಿಯಮದ ತಿದ್ದುಪಡಿ:- ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನಗಳ ಹಂಚಿಕೆ) ನಿಯಮಗಳು, 1991ರ (ಇಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗುವುದು) 5ನೇ ನಿಯಮದ (1)ನೇ ಉಪ ನಿಯಮದಲ್ಲಿ "ಶೇಕಡ 30" ಎಂಬ ಪದ ಮತ್ತು ಅಂಕಿಗಳಿಗೆ ಬದಲಾಗಿ "ಶೇಕಡಾ 40" ಎಂಬ ಪದ ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

3. 8ನೇ ನಿಯಮವನ್ನು ಬಿಟ್ಟುಬಿಡುವುದು:- ಸದರಿ ನಿಯಮಗಳ 8ನೇ ನಿಯಮವನ್ನು ಬಿಟ್ಟುಬಿಡತಕ್ಕದ್ದು.

4. 9-ಎ ನಿಯಮದ ಸೇರ್ಪಡೆ :- ಸದರಿ ನಿಯಮಗಳ 9ನೇ ನಿಯಮದ ನಂತರ ಈ ಕೆಳಕಂಡಿನದನ್ನು ಸೇರಿಸತಕ್ಕದ್ದು, ಅಂದರೆ:-

"9-ಎ ನೋಂದಣಿಯ ನಂತರ ವ್ಯಕ್ತಿಯು ಮೃತಪಟ್ಟ ಸಂದರ್ಭದಲ್ಲಿ - ಈ ನಿಯಮಗಳಲ್ಲಿ ಏನೇ ಇದ್ದಾಗ್ಯೂ ನಿಯಮ 9ರಡಿಯಲ್ಲಿ ಯಾವುದೇ ವ್ಯಕ್ತಿಯು ನೋಂದಣಿ ಮಾಡಿಸಿದ ನಂತರ ನೋಂದಣಿಯನ್ನು ಹಿಂದಕ್ಕೆ ಪಡೆಯುವ ಮೊದಲು ಮೃತರಾದಲ್ಲಿ ಅಂಥ ವ್ಯಕ್ತಿಯ ಗಂಡ : ಹೆಂಡತಿ ಮತ್ತು ಗಂಡ : ಹೆಂಡತಿ ಜೀವಂತವಾಗಿರದಿದ್ದಲ್ಲಿ ಅವನ ಅಥವಾ ಅವಳ ಅವಲಂಬಿತ ಮಕ್ಕಳನ್ನು ಈ ನಿಯಮಗಳ ಉದ್ದೇಶಕ್ಕಾಗಿ ನೋಂದಣಿದಾರನೆಂದು ಭಾವಿಸತಕ್ಕದ್ದು ಮತ್ತು

ನಿಯಮಾವಳಿಗಳ ಪ್ರಕಾರ ನಿವೇಶನ ಹಂಚಿಕೆಗಾಗಿ ಅರ್ಜಿ ಹಾಕಲು ಹಾಗೂ ಹಂಚಿಕೆ ಪರಿಗಣಿಸಲು ಹಕ್ಕುಳ್ಳವನಾಗಿರತಕ್ಕದ್ದು."

